# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

ಬೆಲೆ ರೂ.2.50 WPP No. SK/MNG/WPP/69

D.O.P - 15th of every month from Udupi Sorting Office



**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**

"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists



Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-4 ಪುಟಗಳು-8 Registered Under No.J/UDP/1260/2012-2014 Dated from 01-01-2012 to 31-12-2014.


# ಪಡುಬಿದ್ರಿ ಉದಯಾದ್ರಿಯಲ್ಲಿ ಬ್ರಹ್ಮ ಕುಂಭಾಭಿಷೇಕ

ಸುಮಾರು 150 ವರ್ಷಗಳ ಇತಿಹಾಸ ವಿರುವ ಪಡುಬಿದ್ರಿ ಉದಯಾದ್ರಿ ಕ್ಷೇತ್ರವೆಂದು ಪ್ರತೀತಿ ಇರುವ ಉದಯಾದ್ರಿ ಶ್ರೀ ಬಾಲ ಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಕಳೆದ 2008ರಲ್ಲಿ ನೂತನ ಶಿಲಾಮಯ ಗರ್ಭಗುಡಿ, ತೀರ್ಥ ಮಂಟಪ, ಉತ್ತರ ಗೋಪುರ ಮೊದಲಾದವುಗಳನ್ನು ರಚಿಸಿ ಶ್ರೀದೇವರ ಪುನರ್‌ಪ್ರತಿಷ್ಠೆ ನಡೆಸಿದ್ದು ಇದೀಗ ಈ ದೇವಸ್ಥಾನಕ್ಕೆ ನೂತನ ಸುತ್ತುಪೌಳಿ, ಬಾವಿ, ತುಳಸೀ ಕಟ್ಟೆ, ಒಳಾಂಗಣಕ್ಕೆ ಶಿಲಾ ಹೊದಿಕೆ ಮೊದಲಾದವುಗಳನ್ನು ನಿರ್ಮಾಣ ಮಾಡ ಲಾಗಿದ್ದು ತಾ.01-05-2013ರಿಂದ ವಿವಿಧ ಧಾರ್ಮಿಕ ವಿಧಿ ಗಳೊಂದಿಗೆ ತಾ.03-05-2013ರಂದು ಬ್ರಹ್ಮಕುಂಭಾಭಿ ಷೇಕದೊಂದಿಗೆ ಶ್ರೀದೇವರಿಗೆ ಸಮರ್ಪಿಸಲು ಜೀರ್ಣೋದ್ಧಾರ ಸಮಿತಿಯು ನಿರ್ಣಯಿಸಿದೆ.



ಬಾಲ ಗಣಪತಿ



ಪ್ರಸನ್ನ ಪಾರ್ವತೀ ದೇವಿ

ದಕ್ಷಿಣಾವಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಪರಮಾಶೀರ್ವಾದದೊಂದಿಗೆ ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ನೆರವೇರಲಿರುವ ಈ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಅನ್ನಸಂತರ್ಪಣೆಯಲ್ಲಿ ಭಕ್ತವೃಂದ ದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ತನು ಮನ ಧನಗಳಿಂದ ಸಹಕರಿಸಿ ಗಂಧ ಪ್ರಸಾದವನ್ನು ಸ್ವೀಕರಿಸಿ ಶ್ರೀದೇವರ ಕೃಪೆಗೆ ಪಾತ್ರರಾಗ ಬೇಕೆಂದು ಜೀರ್ಣೋದ್ಧಾರ ಸಮಿತಿ, ಶ್ರೀದೇವಳದ ವ್ಯವಸ್ಥಾಪನಾ ಸಮಿತಿ ಹಾಗೂ ಪ್ರಧಾನ ಅರ್ಚಕರು ವಿನಂತಿಸಿ ಕೊಂಡಿದ್ದಾರೆ.

# ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವ ಆಚರಣೆ

ತಾ.14-3-13ನೇ ಮೀನ ಸಂಕ್ರಮಣ ದಿನ ಬುಧವಾರದಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವವು ನೆರವೇರಿತು.

ಬ್ರಹ್ಮಶ್ರೀ ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆ 8 ಗಂಟೆ ಯಿಂದ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರಪೂಜೆ, ರುದ್ರಪಠಣ, ಇತ್ಯಾದಿ ಧಾರ್ಮಿಕ ವಿಧಿಗಳು ನಡೆದವು. ಸಮಾಜದ ಮಹಿಳೆಯರಿಂದ ಭಜನೆ, ಲಲಿತಾ ಸಹಸ್ರನಾಮ ಪಾರಾಯಣದ ಬಳಿಕ ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ನಡೆದು ಪ್ರಸಾದ ವಿತರಿಸಲಾಯಿತು.

ಪ್ರತಿಷ್ಠಾ ಮಹೋತ್ಸವದಂದು ಮಾರ್ಚ್ ತಿಂಗಳ ಶ್ರೀಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮವು ನಡೆದು ಅದರಲ್ಲಿ ಸಮಾಜಬಾಂಧವರು ಹೃತ್ಪೂರ್ವಕ ವಾಗಿ ಪಾಲ್ಗೊಂಡರು.

ಪ್ರತೀ ವರ್ಷದಂತೆ ಈ ಬಾರಿಯೂ ಪ್ರತಿಷ್ಠಾ ಮಹೋತ್ಸವದಲ್ಲಿ ಸಮಾಜ ಬಾಂಧವರು ಹಾಗೂ ಭಕ್ತಾಧಿಗಳು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

# ಡಾ। ದಯಾನಂದ ರಾವ್ ಸಾಲ ವಿದ್ಯಾರ್ಥಿವೇತನ ನಿಧಿಗೆ ಕೊಡುಗೆ

ಕಳೆದ ಹಲವಾರು ವರ್ಷಗಳಿಂದ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ನೆರವಿಗಾಗಿ ನೀಡುತ್ತಿದ್ದ ಸಾಲ ವಿದ್ಯಾರ್ಥಿ ವೇತನಕ್ಕಾಗಿ ಈ ವರ್ಷವೂ ಡಾ। ದಯಾನಂದ ರಾವ್ ಟ್ರಸ್ಟ್ ರೂ.4,00,001ನ್ನು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘಕ್ಕೆ ಕೊಡುಗೆಯಾಗಿ ನೀಡಿದೆ.

ವಿದ್ಯಾರ್ಥಿಗಳ ನೆರವಿಗಾಗಿ ಈ ಸಾಲ ವಿದ್ಯಾರ್ಥಿ ವೇತನವನ್ನು ಪ್ರತಿ ವರ್ಷವೂ ನಮ್ಮ ಸಂಘವು ಅರ್ಹ ವಿದ್ಯಾರ್ಥಿ ಗಳಿಗೆ ನೀಡುತ್ತಿದ್ದು ನಮ್ಮ ಸಮಾಜದ ವಿದ್ಯಾರ್ಥಿ ಸಮುದಾಯವು ಇದರ ಸದುಪಯೋಗ ಪಡೆದುಕೊಂಡಿದೆ. ಡಾ। ದಯಾನಂದ ರಾವ್ ಟ್ರಸ್ಟ್‌ನ ಈ ಕೊಡುಗೆಯನ್ನು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಿ ಹಾರ್ದಿಕ ಧನ್ಯವಾದವನ್ನು ಅರ್ಪಿಸುತ್ತದೆ. ವಿಶೇಷವಾಗಿ ನಮ್ಮ ಕೇಳಿಕೆಯನ್ನು ಮನ್ನಿಸಿ ಈ ವರ್ಷವೂ ಈ ನಿಧಿಗೆ ಕೊಡುಗೆಯನ್ನು ನೀಡಿರುವ ಮೆನೇಜಿಂಗ್ ಟ್ರಸ್ಟಿ ಶ್ರೀಮತಿ ಮೋಹಿನಿ ದಯಾನಂದ ರಾವ್ ಇವರಿಗೆ ನಮ್ಮ ಕೃತಜ್ಞತೆಗಳು.



## ಶ್ರೀಶಾರದಾ ದೇವಸ್ಥಾನ

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 2. ಫೋನ್ : 2520754**

ಪ್ರಿಯರೇ,

ಸ್ವಸ್ತಿ ಶ್ರೀ ಚಾಂದ್ರ ವಿಜಯ ನಾಮ ಸಂ।ರದ ಮೇಷ ಮಾಸ ಚೈತ್ರ ಕೃಷ್ಣ ಪಕ್ಷ
ತಾ.19-04-2013ನೇ ಶುಕ್ರವಾರ ಸಂಜೆ ಗಂಟೆ 5-00ರಿಂದ
**ಪರಿಸರದ ಭಕ್ತ ಬಾಂಧವರು ಭಕ್ತಿ-ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ ಪ್ರತಿವರ್ಷದಂತೆ**

## ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು

ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಸೇವಾ ರೂಪದಲ್ಲಿ ರೂ.125/-ನ್ನು ನೀಡಿ ಪೂಜೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಅಪರಾಹ್ನ 3ರಿಂದ ದೀಪವಿಟ್ಟು ಮಂಡಲ ರಚನೆ, ಸಂಜೆ 5 ರಿಂದ ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತಿ ಪಾರಾಯಣ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ ವಿಧಿಗಳು ನಡೆಯಲಿವೆ.

**– ಆಡಳಿತ ಮಂಡಳಿ**



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಕುಂಜಿಬೆಟ್ಟು, ಉಡುಪಿ – 2.**

**ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ**
**ತಾ.15-05-2013 ಬುಧವಾರ**

## ಸಾಮೂಹಿಕ ಉಪನಯನ

**ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.**

**ಮಧ್ಯಾಹ್ನ 11-30ಕ್ಕೆ ಪಾವಂಜೆ ಶ್ರೀ ರವಿ ಉಪಾಧ್ಯಾಯರಿಂದ ಆದಿ ಶಂಕರಾಚಾರ್ಯರ ಸಂದೇಶದ ಬಗ್ಗೆ ಪ್ರವಚನ. ಸಂಜೆ 4-30ರಿಂದ ವೇದಾಂತ ತತ್ತ್ವವೇದಿಕೆ- ಜ್ಞಾನಭಾರತಿ ಯವರ ಸಹಯೋಗದೊಂದಿಗೆ ಶ್ರೀ ಶಂಕರ ಜಯಂತಿ ಕಾರ್ಯಕ್ರಮ ಜರಗಲಿರುವುದು.**

**ಸರ್ವರಿಗೂ ಆದರದ ಸ್ವಾಗತ :**

**– ಕಾರ್ಯದರ್ಶಿ**

**ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.30-04-2013ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್/ಕಾರ್ಯದರ್ಶಿಯವರಿಗೆ ತಿಳಿಸಲು ವಿನಂತಿಸಲಾಗಿದೆ.**

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು ಮತ್ತು ಸುದ್ದಿಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

## ಚಿಂತನ

ಭಾರತೀಯ ಬೆಸ್ತರಿಬ್ಬರನ್ನು ಹತ್ಯೆಗೈದ ಆರೋಪದಲ್ಲಿ ವಿಚಾರಣಾಧೀನ ಇಟಲಿಯ ನಾವಿಕರಿಬ್ಬರನ್ನು ಆ ದೇಶದ ಚುನಾವಣೆಯಲ್ಲಿ ಮತದಾನ ಮಾಡುವ ಸಲುವಾಗಿ ಅಲ್ಲಿಯ ರಾಯಭಾರಿಗಳ ಉಚಿತ ಬೇಡಿಕೆಯಂತೆ ಭಾರತೀಯ ಸರ್ವೋಚ್ಚ ನ್ಯಾಯಾಲಯವು ಮತದಾನದ ನಂತರ ಕೂಡಲೇ ಹಿಂದಕ್ಕೆ ಕಳುಹಿಸಬೇಕೆಂಬ ಷರತ್ತಿನ ಮೇರೆಗೆ ಇಟಲಿಗೆ ಕಳುಹಿಸುವ 'ಔದಾರ್ಯ' ತೋರಿತು.


ಮತದಾನದ ನಂತರ ಆ ಇಬ್ಬರು ಕೈದಿಗಳನ್ನು ಮತ್ತೆ ಹಿಂದಕ್ಕೆ ಕಳುಹಿಸಲು ಒಪ್ಪದಿದ್ದಾಗ ಮುಂದೆ ಅವರನ್ನು ವಿಚಾರಣೆ ನಡೆಯುವಾಗ ಆ ಕೈದಿಗಳಿಬ್ಬರಿಗೂ ಜೀವ ಹಾನಿಯಾಗದಂತೆ ರಕ್ಷಿಸುತ್ತೇವೆಂದು ಭರವಸೆಯ 'ಮುಚ್ಚಳಿಕೆ' ನೀಡಿದ ಭಾರತ ಸರಕಾರದ ದೌರ್ಬಲ್ಯದ ಬಗ್ಗೆ ನಾವು ಯೋಚಿಸಬೇಕು.

ಪ್ರಪಂಚದ ಅತೀ ದೊಡ್ಡ ಪ್ರಜಾಪ್ರಭುತ್ವವಾದ ಭಾರತವು ಏಕೆ ಹೀಗೆ ನಾಚಿಗೆ ಕೇಡಿನ ಕೆಲಸ ಮಾಡಿತು? ವಿಚಾರಣಾಧೀನ ಕೈದಿಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ದಲ್ಲಿ ಪ್ರಕರಣವಿರುವಾಗ, ಮುಂದೆ ನ್ಯಾಯಲಯದ ತೀರ್ಪಿನಲ್ಲಿ ಆ ಕೈದಿಗಳಿಗೆ ಮರಣದಂಡನೆಯೂ ಬರಬಹುದಲ್ಲವೇ? ಸರಕಾರದಿಂದ ಇಟಲಿ ಸರಕಾರಕ್ಕೆ ನೀಡಿದ ಮುಚ್ಚಳಿಕೆಯಂತೆ ನ್ಯಾಯಾಲಯ ಆ ಕೈದಿಗಳಿಗೆ ಅಂತಹ ತೀರ್ಪನ್ನು ನೀಡ ಬಾರದು ಎಂಬ ಸಂಕೇತವೇ? ಇದು ಸರ್ವೋಚ್ಚ ನ್ಯಾಯಾಲಯದ ಕಾರ್ಯ ವ್ಯಾಪ್ತಿಯ ಮೇಲೆ ಸರಕಾರದ ಹಿಡಿತವಲ್ಲವೇ? ಹಾಗಿದ್ದಲ್ಲಿ ಈ ನ್ಯಾಯಾಲಯಕ್ಕಿಂತಲೂ ಸರಕಾರ-ಸರಕಾರದಲ್ಲಿರುವ ಮಂತ್ರಿ ಮಂಡಲವೇ ಶ್ರೇಷ್ಠವೇ?

ಅದಕ್ಕಿಂತಲೂ ನಾಚಿಕೆಗೇಡು ಏನೆಂದರೆ- ಆ ಕೈದಿಗಳಿಬ್ಬರೂ ಹಿಂದಕ್ಕೆ ಬಂದಿದ್ದು "ಸರಕಾರದ ಸಾಧನೆ " ಎಂದು ಆಡಳಿತಾರೂಢ ರಾಜಕೀಯ ಪಕ್ಷ ಬಡಾಯಿ ಕೊಚ್ಚಿಕೊಳ್ಳು ತ್ತಿದ್ದರೆ, ಆ ಸಾಧನೆಯಲ್ಲಿ ನಮ್ಮ ಪಾಲೂ ಸಾಕಷ್ಟಿದೆ ಎಂದು ಪ್ರತಿಪಕ್ಷಗಳೂ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿವೆ. ನಮ್ಮ ಘನ ಸರಕಾರದ ಮುಚ್ಚಳಿಕೆಯ ಮೇಲೆ ನಂಬಿಕೆ ಇಟ್ಟು ಆ ಸಣ್ಣ ದೇಶದ ಸರಕಾರ ಆ ಕೈದಿಗಳನ್ನು ನಮ್ಮ ದೇಶಕ್ಕೆ ಕಳುಹಿಸಿದ್ದು, ಪ್ರಪಂಚದಲ್ಲಿಯೇ ಜನಸಂಖ್ಯೆಯಲ್ಲಿ ದ್ವಿತೀಯ ಸ್ಥಾನದಲ್ಲಿರುವ, ಬಹುದೊಡ್ಡ ಪ್ರಜಾಪ್ರಭುತ್ವವಾದಿ ಭಾರತಕ್ಕೆ ಇದು ಶೋಭೆಯೇ? ನಾವು_ನೀವು ಚಿಂತನ ಶೀಲರಾಗಬೇಕು.

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಒಮ್ಮೆ ರಾಮ, ಕೃಷ್ಣರು ಎಂದಿನಂತೆ ವಸುದೇವನಲ್ಲಿಗೆ ಬಂದು ಅಭಿನಂದನೆ ಮಾಡಿದರು. ಅವರನ್ನು ಆಶೀರ್ವದಿಸಿದ ವಸುದೇವನು ಅವರನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡನು. ತನ್ನ ಇಬ್ಬರೂ ಮಕ್ಕಳೂ ಅವತಾರ ಪುರುಷರೆಂಬುದನ್ನು ಋಷಿಗಳಿಂದಲೂ, ಅನುಭವದಿಂದಲೂ ತಿಳಿದುಕೊಂಡಿದ್ದ ವಸುದೇವನು ಅವರನ್ನು ಸಂಬೋಧಿಸಿ ಹೇಳಿದನು. "ಕೃಷ್ಣ, ರಾಮ ನೀವಿಬ್ಬರೂ ಪರಮ ಪುರುಷರು. ನೀವು ಈ ವಿಶ್ವವನ್ನು ಲೀಲೆಗಾಗಿ ನಿರ್ಮಿಸಿರುವಿರಿ. ಪ್ರತಿಯೊಂದು ವಸ್ತುವಿನಲ್ಲೂ ನೀವು ಅಂತರ್ಯಾಮಿಗಳಾಗಿ ಸೇರಿಕೊಂಡಿರುವಿರಿ. ನಿಜವಾಗಿಯೂ ನೀವು ಈ ವಿಶ್ವದ ಆತ್ಮ ಮಾತ್ರವಲ್ಲ, ವಿಶ್ವವೇ ಆಗಿದ್ದೀರಿ. ಶ್ರೀ ಹರಿಯೇ, ಈ ಮಾಯಾ ಪ್ರಪಂಚದಲ್ಲಿ ನಾನು ದಿಕ್ಕೆಟ್ಟು ಸುತ್ತಾಡುವ ಸ್ಥಿತಿಯಿಂದ ನನ್ನನ್ನು ಪಾರು ಮಾಡಿ, ನಿನ್ನ ದಿವ್ಯ ಸನ್ನಿಧಿಯಲ್ಲಿ ನನ್ನ ಮನಸ್ಸು ಸ್ಥಿರವಾಗಿ ನೆಲೆನಿಲ್ಲುವಂತೆ ಮಾಡು".

ಆಗ ಗೋವಿಂದನು ಮುಗುಳು ನಕ್ಕು ಮಧುರವಾದ ಮಾತುಗಳಿಂದ ತನ್ನ ತಂದೆಗೆ ಇಂತೆಂದನು, "ಅಪ್ಪಾಜಿ, ನಾವಿಬ್ಬರೂ ನಿನ್ನ ಮಕ್ಕಳೇ. ತತ್ತ್ವತ: ನೀನು, ನಾನು, ನಮ್ಮಣ್ಣ, ಯಾದವರು ಈ ಚರಾಚರ ಜಗತ್ತು ಒಂದೇ ಒಂದಾದ ಆತ್ಮವೇ. ಈ ಆತ್ಮವು ಅದ್ವಿತೀಯ, ಸತ್ಯ, ಜ್ಞಾನರೂಪ, ಅನಾದಿ, ಅನಂತ. ಇದನ್ನೇ ತತ್ತ್ವವಿದರು ಬ್ರಹ್ಮ ಎನ್ನುವರು. ತನ್ನ ಮಾಯಾ ಶಕ್ತಿಯಿಂದ ಇದು ಅನೇಕವಾಗಿ ಕಾಣುತ್ತದೆ. ಒಂದೇ ಕಡೆ ಇರುವ ಅನೇಕ ಕನ್ನಡಿಗಳಲ್ಲಿ ನಾವು ಅನೇಕವಾಗಿ ಕಾಣಿಸುವುದಿಲ್ಲವೇ? ಆ ಪ್ರತಿಬಿಂಬಗಳನ್ನು ನೋಡುವವರು ನಾವೇ ಅಲ್ಲವೇ? ಆದರೆ ಮಾಯಾ ದರ್ಪಣ ಅತಿವಿಲಕ್ಷಣವಾದುದು. ಅಲ್ಲಿ ಪ್ರತಿಯೊಂದು ಪ್ರತಿಬಿಂಬವೂ ಬಿಂಬಕ್ಕಿಂತಲೂ ಭಿನ್ನವಾದ ಅಸ್ತಿತ್ವವನ್ನು ಹೊಂದಿದ ಹಾಗಿರುತ್ತದೆ. ಈ ಮಾಯೆಯೊಂದು ಉಪಾಧಿ. ಆದುದರಿಂದ ಒಂದೇ ವಸ್ತು ಅನೇಕವಾಗಿ ಕಾಣಿಸುತ್ತದೆ".

ಹೀಗೆ ಭಗವಂತನ ಉಪದೇಶವನ್ನು ಕೇಳಿದ ವಸುದೇವನ ಮನಸ್ಸು ನಾನಾತ್ವಭ್ರಮೆಯಿಂದ ಮುಕ್ತವಾಗಿ ಪ್ರಸನ್ನವಾಯಿತು, ಶಾಂತವಾಯಿತು. ಅಲ್ಲೇ ಇದ್ದ ತಾಯಿ ದೇವಕಿಗೆ ಒಂದು ಆಸೆ ಹುಟ್ಟಿತು. ಹಿಂದೆ ರಾಮ, ಕೃಷ್ಣರು ಸಾಂದೀಪನಿ ಗುರುಗಳ ಮೃತಪುತ್ರನನ್ನು ಯಮಲೋಕದಿಂದ ಹಿಂದಕ್ಕೆ ತಂದಿದ್ದರಲ್ಲ. ಅದನ್ನು ಜ್ಞಾಪಿಸಿಕೊಂಡು, ಕಂಸನಿಂದ ಹತರಾದ ತನ್ನ ಮಕ್ಕಳನ್ನು ಕಾಣುವ ಇಚ್ಛೆಯನ್ನು ತೋಡಿಕೊಂಡಳು. ರಾಮ, ಕೃಷ್ಣರು



ತಾಯಿಯ ಇಚ್ಛೆಯನ್ನು ಪೂರೈಸುವುದು ತಮ್ಮ ಕರ್ತವ್ಯವೆಂದು ತಿಳಿದು ತಮ್ಮ ಯೋಗ ಮಾಯೆಯ ಪ್ರಭಾವದಿಂದ ಸುತಲ ಲೋಕಕ್ಕೆ ಹೋದರು. ಸುತಲವನ್ನು ಆಳುತ್ತಿದ್ದವನು ಬಲಿ ಚಕ್ರವರ್ತಿ. ಅವನು ರಾಮ, ಕೃಷ್ಣರನ್ನು ಶ್ರದ್ಧಾ, ಭಕ್ತಿಗಳಿಂದ ಅರ್ಚಿಸಿದನು. ಶ್ರೀಕೃಷ್ಣನು ಪ್ರಸನ್ನನಾಗಿ ನುಡಿದನು "ಪುಣ್ಯಾತ್ಮನಾದ ಬಲಿಯೇ ಮೊದಲನೆಯ ಮನ್ವಂತರ (ಸ್ವಾಯಂಭುವ)ದಲ್ಲಿ ಮರೀಚಿಗೆ ಊರ್ಣೆಯಲ್ಲಿ ಆರು ಮಕ್ಕಳು ಹುಟ್ಟಿದರು. ಅವರೆಲ್ಲ ದೇವತೆಗಳೇ ಆಗಿದ್ದರು. ಒಮ್ಮೆ ಬ್ರಹ್ಮನು ತನ್ನ ಮಗಳಲ್ಲಿ ಪ್ರಣಯ ಮಗ್ನನಾಗಿದ್ದುದನ್ನು ನೋಡಿ ಅವರು ಜೋರಾಗಿ ನಕ್ಕು ಬಿಟ್ಟರು. ಹೀಗೆ ಶಾಪಗ್ರಸ್ತರಾಗಿ ಅಸುರಯೋನಿಯಲ್ಲಿ ಹುಟ್ಟಬೇಕಾಯಿತು. ಅವರು ಹಿರಣ್ಯಕಶಿಪುವಿನ ಹೆಂಡತಿಯ ಗರ್ಭವನ್ನು ಸೇರಿದರು. ಹಾಗೆ ಹುಟ್ಟಿದ ಆರು ಪುತ್ರರನ್ನೂ ಯೋಗ ಮಾಯೆಯು ಒಬ್ಬೊಬ್ಬರನ್ನಾಗಿ ದೇವಕಿಯ ಗರ್ಭದಲ್ಲೂ ತಂದಿರಿಸಿದಳು. ಆ ಆರು ಮಕ್ಕಳನ್ನೂ ಕಂಸನು ಕೊಂದನು. ಈಗ ಅವರೆಲ್ಲ ನಿನ್ನ ಬಳಿ ಇದ್ದಾರೆ. ಪುತ್ರ ವತ್ಸಲೆಯಾದ ದೇವಕಿಯು ಅವರನ್ನೆಲ್ಲ ನೋಡ ಬಯಸಿದ್ದಾಳೆ. ದಯವಿಟ್ಟು ಅವರನ್ನು ನಮ್ಮೊಡನೆ ಕಳುಹಿಸಿಕೊಡು. ಅವರ ಶಾಪ ವಿಮೋಚನೆಯ ಕಾಲ ಸನ್ನಿಹಿತವಾಗಿದೆ. ಅವರು ದೇವಕಿಗೆ ದರ್ಶನಕೊಟ್ಟು ತಮ್ಮ ಲೋಕಕ್ಕೆ ಹೊರಟು ಹೋಗುತ್ತಾರೆ." ಬಲಿಯು ಪುನಃ ಬಲರಾಮ, ಕೃಷ್ಣರನ್ನು ಪೂಜಿಸಿ ಆ ಮಕ್ಕಳನ್ನು ಅವರ ಸಂಗಡ ಕಳುಹಿಸಿ ಕೊಟ್ಟನು. ಅವರನ್ನು ಕರೆದುಕೊಂಡು ಬಂದ ರಾಮ, ಕೃಷ್ಣರು ಅವರನ್ನು ತಾಯಿಗೆ ಒಪ್ಪಿಸಿದರು. ಅವರನ್ನು ಕಂಡು ದೇವಕಿಯ ಎದೆಯಿಂದ ಸ್ತನ್ಯ ಹರಿಯಿತು. ಅವಳು ಆ ಮಕ್ಕಳಿಗೆ ಹಾಲೂಡಿಸಿ ದಿವ್ಯಾನಂದ ಅನುಭವಿಸಿದಳು. ದೇವಕಿಯ ಎದೆಯ ಹಾಲನ್ನು ಶ್ರೀಕೃಷ್ಣನೇ ಮೊದಲು ಕುಡಿದದ್ದರಿಂದ ಅದು ಅಮೃತ ಸಮಾನವಾಗಿತ್ತು. ಅದರಿಂದ ಮತ್ತು ಭಗವಂತನ ಸ್ಪರ್ಶದಿಂದ ಶಾಪನಿವೃತ್ತಿಯಾಗಿ ಮೂಲತಃ ಸ್ಮರ, ಉದ್ಗಿಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್, ಘಣಿ ಎಂಬ ಮರೀಚಿಯ ಆ ಆರು ಮಕ್ಕಳು ಎಲ್ಲರೂ ನೋಡುತ್ತಿದ್ದಂತೆ ತಮ್ಮ ಲೋಕಕ್ಕೆ ಹೊರಟು ಹೋದರು. ಅದನ್ನು ನೋಡಿದ ದೇವಕಿಯು ಅದೆಲ್ಲ ಅಚಿಂತ್ಯ ಶಕ್ತಿಯ ಶ್ರೀಕೃಷ್ಣನ ಮಾಯೆ ಎಂದು ತಿಳಿದುಕೊಂಡಳು.

ಬಲರಾಮ, ಕೃಷ್ಣರಿಗೆ ಸುಭದ್ರೆ ಎಂಬ ತಂಗಿಯಿದ್ದಳಷ್ಟೆ? ಅವಳನ್ನು ದುರ್ಯೋಧನನಿಗೆ ಕೊಡಬೇಕೆಂದು ಬಲರಾಮನು ನಿಶ್ಚಯಿಸಿದ್ದನು. ಆದರೆ ವಸುದೇವನಾಗಲೀ, ಶ್ರೀ ಕೃಷ್ಣನಾಗಲೀ ಅದನ್ನು ಸಮ್ಮತಿಸಿರಲಿಲ್ಲ. ತೀರ್ಥಯಾತ್ರೆಗೆ ಹೊರಟ್ಟಿದ್ದ ಅರ್ಜುನನು ಪ್ರಭಾಸಕ್ಷೇತ್ರಕ್ಕೆ ಬಂದಾಗ ಅವನಿಗೆ ಸುಭದ್ರೆಯ ವಿವಾಹದ ಸುದ್ದಿ ಸಿಕ್ಕಿತು. ಸುಭದ್ರೆ ತನ್ನ ಹೆಂಡತಿಯಾಗಬೇಕೆಂದು ಅವನಿಗೆ ಆಸೆಯಾಯಿತು.

(ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಕಟಪಾಡಿ ಉಮೇಶ್ ರಾವ್, ಕುಡಾಲ್

ಮಹಾರಾಷ್ಟ್ರದ ಕುಡಾಲ್‌ನಲ್ಲಿ ವಾಸ್ತವ್ಯದಲ್ಲಿರುವ ಕಟಪಾಡಿ ಮೂಡಬೆಟ್ಟು ಉಮೇಶ್ ರಾಯರು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪ್ರೋತ್ಸಾಹ ನೀಡಿದ್ದಾರೆ. ಉಡುಪಿ ತಾಲೂಕು ಕಟಪಾಡಿಯ ಮೂಡಬೆಟ್ಟು ಗ್ರಾಮದ ದಿ।ಕೆ.ಆನಂದರಾವ್ ಮತ್ತು ದಿ।ಲಕ್ಷ್ಮೀಆನಂದರಾವ್ ದಂಪತಿಗಳ ನಾಲ್ವರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳಲ್ಲಿ ಕೊನೆಯವರಾದ ಶ್ರೀ ಉಮೇಶ್ ರಾಯರು, ಕಟಪಾಡಿಯ ಎಸ್. ವಿ.ಎಸ್. ಪ.ಪೂ. ಕಾಲೇಜಿನಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆಯಾದ ನಂತರ ಮಣಿಪಾಲದ ಎಂ.ಐ.ಟಿ. ಕಾಲೇಜಿನಲ್ಲಿ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್ ಪದವಿ ಪಡೆದು ಉದ್ಯೋಗ ಅರಸಿ ಮಹಾರಾಷ್ಟ್ರಕ್ಕೆ ತೆರಳಿದರು. ಸುಮಾರು ಆರು ತಿಂಗಳ ಅವಧಿ ಖಾಸಗಿ ಕಂಪನಿಯಲ್ಲಿ ಉದ್ಯೋಗಸ್ಥರಾಗಿದ್ದು ಮಹಾರಾಷ್ಟ್ರ ಸರಕಾರದ ಉದ್ಯೋಗ ವಿನಿಮಯ ಕೇಂದ್ರದ ಕರೆಯಂತೆ 1981ರಲ್ಲಿ ಮಹಾರಾಷ್ಟ್ರ ಸರಕಾರದ ಪಿ.ಡಬ್ಲ್ಯು.ಡಿ.




ಇಲಾಖೆಯಲ್ಲಿ (ಲೋಕೋಪಯೋಗಿ ಇಲಾಖೆ) ಜೂನಿಯರ್ ಇಂಜಿನಿಯರ್ ಆಗಿ ರತ್ನಗಿರಿ ಜಿಲ್ಲೆಗೆ ನಿಯುಕ್ತಿಗೊಂಡರು. ಮುಂದೆ ಸಿಂಧುರ್ಗ ಮೊದಲಾದ ಸ್ಥಳಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸಿರುವ ಶ್ರೀಯುತರು ಸದ್ಯ ಅಸಿಸ್ಟೇಂಟ್ ಇಂಜಿನಿಯರ್ ಆಗಿ ಭಡ್ತಿಗೊಂಡು ರತ್ನಗಿರಿಯಲ್ಲಿ ಜನಾನುರಾಗಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಉಡುಪಿ ಉದ್ಯಾವರ ಅನಂತಕೃಷ್ಣ ರಾಯರ ಪುತ್ರಿ ಶ್ರೀಮತಿ ಪ್ರಜ್ವಲಾರನ್ನು (ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಇದರ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾಯರ ಸಹೋದರಿ) ವಿವಾಹವಾಗಿರುವ ಶ್ರೀಯುತ ಉಮೇಶ್ ರಾವ್ ದಂಪತಿಗಳಿಗೆ ಓರ್ವ ಪುತ್ರ ಡಾ।ಅವಿನಾಶ್ ರಾವ್, ಬಿ.ಡಿ.ಎಸ್., Aesthetic Dentist ಪದವಿ ಪಡೆದಿದ್ದು ಉಡುಪಿಯ ಪ್ರತಿಷ್ಠಿತ ಮಿತ್ರ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಓರ್ವ ಪುತ್ರಿ ಶ್ರೀಮತಿ ಅನೂಷಾ ರೋಹನ್ ರಾವ್, ಫಿಸಿಯೋಥೆರಪಿಸ್ಟ್, ಮುಂಬೈಯ ಅಂಧೇರಿಯಲ್ಲಿ ವಾಸ್ತವ್ಯದಲ್ಲಿದ್ದಾರೆ.

ಶ್ರೀ ಕೆ. ಉಮೇಶ್‌ರಾವ್ ರಾವ್ ಅವರ ಕೊಡುಗೆಗಾಗಿ ಶ್ರೀ ಶಾರದಾ ಬಳಗವು ಅನಂತ ಕೃತಜ್ಞತೆ ಸಲ್ಲಿಸುತ್ತಾ ಅವರಿಗೆ ಹಾಗೂ ಅವರ ಕುಟುಂಬಕ್ಕೆ ಶ್ರೀ ಶಾರದೆಯು ಇನ್ನೂ ಹೆಚ್ಚಿನ ಶ್ರೇಯಸ್ಸನ್ನುಂಟುಮಾಡಲಿ ಎಂದು ಶ್ರೀಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್

# ಕೆ.ಎಸ್.ಇ.ಬಿ.ಯ ಉತ್ತಮ ಸೇವಾ ಪ್ರಶಸ್ತಿ



ಕೇರಳ ರಾಜ್ಯ ವಿದ್ಯುತ್ ಇಲಾಖೆ (ಕೆ.ಎಸ್.ಇ.ಬಿ)ಯು ನೀಡುವ ಕೇರಳ ರಾಜ್ಯ ಮಟ್ಟದ ಉತ್ತಮ ಸೇವಾ ಪ್ರಶಸ್ತಿ ಅಡೂರಿನ ಚರಕಂಡದ ಪಿ.ಸತ್ಯನಾರಾಯಣರಿಗೆ ದೊರೆತಿದೆ. ಇವರು 2001ರಲ್ಲಿ ವೃತ್ತಿ ಜೀವನ ಆರಂಭಿಸಿ ಇದೀಗ ಚಟ್ಟಂಚಾಲ್ ವಿದ್ಯುತ್ ಕಚೇರಿಯಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಶಸ್ತಿ ಇತ್ತೀಚೆಗಿನ ದಶಕಗಳಲ್ಲಿ ಮೊದಲ ಬಾರಿಗೆ ಕನ್ನಡಿಗರೊಬ್ಬರಿಗೆ ದೊರೆತಿದೆ. ಸತ್ಯನಾರಾಯಣರು ಮೈಲಾಟಿಯ ವಿದ್ಯುತ್ ಇಲಾಖೆಯ ಸೇವಾವಧಿಯಲ್ಲಿ ವಿದ್ಯುತ್ ಇಲಾಖೆಗೆ ಅನೇಕ ಹೊಸ ಅವಿಷ್ಕಾರ ಮತ್ತು ಸಂಶೋಧನೆಗಳಿಂದ ಆರ್ಥಿಕ ಉಳಿತಾಯವಾಗುವಂತೆ ಮಾಡಿದ್ದರು. ಈ ಸಾಧನೆಯನ್ನು ಮೆಚ್ಚಿದ ಕೇರಳ ರಾಜ್ಯ ವಿದ್ಯುತ್ ಇಲಾಖೆ ಉತ್ತಮ ಸೇವಾ ಪ್ರಶಸ್ತಿ ನೀಡಿ ಸತ್ಯನಾರಾಯಣರನ್ನು ಗೌರವಿಸಿದೆ. ಅಡೂರಿನ ಚರಕಂಡದ ಪಣಿಯಪ್ಪಯ್ಯ ಲೀಲಾವತಿ ದಂಪತಿ ಪುತ್ರರಾದ ಇವರು ಅಡೂರು ಸರಕಾರಿ ಪ್ರೌಢಶಾಲೆ, ಕಾಸರಗೋಡು ಸರಕಾರಿ ಕಾಲೇಜು, ಬೆಂಗಳೂರಿನ ಎಸ್.ಜೆ.ಪಿ. ಕಾಲೇಜಿನ ಹಳೆ ವಿದ್ಯಾರ್ಥಿಯಾಗಿದ್ದಾರೆ.

# ಹೆಮ್ಮೆ ಪಡುವ ಗುರುಗುಂಜಿ

ಇಂದ್ರ ನೀಲಸ್ಯುನೀಲೋರಸ್ತಿ
ಪದ್ಮರಾಗಸ್ತ್ಯ ರಾಗಿಮಾ।
ಉಭಯಂ ಮಯಿಚಾಸ್ತೀತಿ
ಹಂತ ಗುಂಜಾ ವಿಜೃಂಭತೆ॥

ನನ್ನ ಮೈಯ್ಯ ಮೇಲ್ ವರ್ಣವು ಇಂದ್ರ ನೀಲಮಣಿಯ ನೀಲ ವರ್ಣದಂತೆ ಶೋಭಿಸುತ್ತಿರುವುದು. ಉಳಿದ ಮೈಯ ಭಾಗವೆಲ್ಲಾ ಪದ್ಮರಾಗ ಮಣಿಯ ಕೆಂಬಣ್ಣಯುಕ್ತವಾಗಿ ಕಂಗೊಳಿಸುತ್ತಿರುವುದು. ಹೀಗೆ, ಅ..ಹ..ಹ!.ನೀಲ– ಕೆಂಪು ಎಂಬ ಎರಡು ಬಣ್ಣಗಳು ಮೇಳೈಸಿಕೊಂಡು, ನನ್ನನ್ನು ಬೆಳಗಿಸುತ್ತಿವೆಯಲ್ಲಾ! ಎಂದು, ಗುರು ಗುಂಜಿ ಕಾಳು, ತನ್ನಲ್ಲೇ ಭಾವಿಸಿಕೊಂಡು, ಬೀಗುತ್ತಿರುವುದು ಎಂದು ಓರ್ವ ಸಂಸ್ಕೃತ ಕವಿಯ ಕವಯಿಪಿರುವರು ಸಂಗ್ರಹಿಸಿ ಕನ್ನಡಕ್ಕೆ ಅನುವಾದಿಸಿ ಪ್ರೇಷಿಸಿದವರು;

– ಮುಕ್ಕ ಸಾಂತೂರು ವಾಸುದೇವ ಸುಬ್ರಹ್ಮಣ್ಯ ಶರ್ಮಾ, ಆಯುರ್ವೇದೀ

# ದೆಹಲಿ ತುಳು ಸಿರಿ ಅಧ್ಯಕ್ಷರಾಗಿ ಡಾ। ವೈ.ಅವನೀಂದ್ರನಾಥ್ ರಾವ್



ತುಳು ಭಾಷೆಯನ್ನು ಭಾರತದ ಸಂವಿಧಾನದ ಎಂಟನೆ ಪರಿಚ್ಛೇದಕ್ಕೆ ಸೇರಿಸಬೇಕೆನ್ನುವ ಉದ್ದೇಶದಿಂದ ಈಚೆಗೆ ನಡೆದ 'ದೆಹಲಿ ತುಳು ಸಿರಿ; ಜಾಗತಿಕ ಸಮಾವೇಶದ ಹಿನ್ನೆಲೆಯಲ್ಲಿ ದೆಹಲಿ ತುಳು ಸಿರಿ ಸಂಘಟನೆಯನ್ನು ಸ್ಥಾಪಿಸಿಲಾಗಿದ್ದು, ಡಾ। ವೈ.ಅವನೀಂದ್ರನಾಥ್ ರಾವ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ .


ಡಾ। ಬಿ.ವಿ.ವಿವೇಕ ರೈ ಸೇರಿದಂತೆ ಪ್ರಮುಖ ಸಾಹಿತಿಗಳು, ಕೇಂದ್ರ ಸಚಿವರು, ಖ್ಯಾತ ಸಿನಿಮಾ ತಾರೆಯರು ಭಾಗವಹಿಸಿದ್ದ ಬೃಹತ್ ಸಮಾವೇಶ ರಾಜಧಾನಿಯಲ್ಲಿ ಯಶಸ್ವಿಯಾಗಿ ಜರಗಿತ್ತು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ, ಹಿರಿಯರಾದ ಶ್ರೀ ಐ. ರಾಮಮೋಹನ ರಾವ್ ಮತ್ತು ಸಾಹಿತಿ ಡಾ ಪುರುಷೋತ್ತಮ ಬಿಳಿಮಲೆ ಸೇರಿದಂತೆ ತುಳುವರ ನಿಯೋಗವು ತುಳು ಭಾಷೆಗೆ ಸಂವಿಧಾನದ ಮಾನ್ಯತೆ ನೀಡಬೇಕೆನ್ನುವ ಮನವಿಯನ್ನು ಸದ್ಯದಲ್ಲೇ ಪ್ರಧಾನಿಯವರಿಗೆ ಸಲ್ಲಿಸಲಿದೆ.

# ತೀರ್ಥಯಾತ್ರೆ

ಉಡುಪಿಯಲ್ಲಿರುವ ಶ್ರೀ ಬ್ರಹ್ಮಾವರ ನಾರಾಯಣ ರಾವ್ ಮತ್ತು ಶ್ರೀಮತಿ ಪದ್ಮಾಕ್ಷಿ ಎನ್.ರಾವ್ ಇವರ ವೈವಾಹಿಕ ಜೀವನದ ಸುವರ್ಣ ಮಹೋತ್ಸವದ ಅಂಗವಾಗಿ ಮಾರ್ಚ್ 5ರಿಂದ ಮಾರ್ಚ್ 17ರ ವರೆಗೆ ಶ್ರೀ ರಾಮಜನ್ಮಭೂಮಿ, ಅಯೋಧ್ಯೆ, ವಾರಣಾಸಿ, ಪ್ರಯಾಗ (ತ್ರಿವೇಣಿ ಸಂಗಮ), ಗಯಾ, ಬುದ್ಧಗಯಾ, ಸಾರನಾಥ ಮುಂತಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಅವರೊಂದಿಗೆ ಅವರ ಮಗ ಅನಿಲಕುಮಾರ ಮತ್ತು ಅಣ್ಣನ ಮಗ ಪದ್ಮನಾಭ ರಾವ್ ಕೂಡಾ ಸಹ ಯಾತ್ರಾರ್ಥಿಗಳಾಗಿದ್ದರು. ನಿರ್ಮಲಾ ಟ್ರಾವೆಲ್ಸ್ ಅವರು ತೀರ್ಥಕ್ಷೇತ್ರ ಸಂದರ್ಶಿಸುವ ವ್ಯವಸ್ಥೆ ಮಾಡಿದ್ದರು. ತಾ.8-3-2013ರಂದು ದಿಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿದರು. ತಾ.9-3-2013ರಿಂದ 14-3-2013ರ ವರೆಗೆ ತೀರ್ಥಯಾತ್ರೆ ನಡೆಯಿತು. ತಾ.15-3-2013ರಂದುಆಗ್ರಾದ ತಾಜಮಹಲ್ ಮತ್ತು ಕೃಷ್ಣಜನ್ಮಭೂಮಿ ಮಥುರಕ್ಕೂ ಬಂದು ಅಲ್ಲಿಂದ ತಾ.16-3-2013ರಂದು ನಾವು ದಿಲ್ಲಿ ಮೂಲಕ ಊರಿಗೆ ಮರಳಿದರು.

# "ಕಲಾ ಕೇದಿಗೆ" ಚಿತ್ರಕಲಾ ಪ್ರದರ್ಶನ ಮತ್ತು ಭಾಸ್ಕರ ಸಂಸ್ಮರಣೆ



ಮಂಗಳೂರು ಲಯನ್ಸ್ ಕ್ಲಬ್ ಹಾಗೂ ಕೇದಿಗೆ ಪ್ರತಿಷ್ಠಾನದ ಆಶ್ರಯದಲ್ಲಿ ಇಲ್ಲಿನ ಕದ್ರಿ ಮಲ್ಲಿಕಟ್ಟೆ ಲಯನ್ಸ್ ಸೇವಾಸದನದಲ್ಲಿ ಭಾನುವಾರ ದಿನಾಂಕ 31-03-2013 ರಂದು ನಡೆದ ಕೇದಿಗೆ ವಂಶದ ಕಲಾವಿದರ ಚಿತ್ರಕಲಾ ಪ್ರದರ್ಶನ "ಕಲಾಕೇದಿಗೆ" ಉದ್ಘಾಟನೆಗೊಂಡಿತು. ಕೇದಿಗೆ ಮನೆತನದ ಹಿರಿಯ ಕಲಾವಿದೆ ಕೆ. ಲಕ್ಷ್ಮಿ ಭಾಸ್ಕರ ರಾವ್ ಕಲಾ ಪ್ರದರ್ಶನ ಉದ್ಘಾಟಿಸಿದರು. ಹಿರಿಯ ಚಿತ್ರಕಲಾವಿದ ಮಂಗಳೂರಿನ ಗಣೇಶ ಸೋಮಯಾಜಿ, ಎಸ್ ಟಿ ಎಸ್ ಕೋರ್ ಡೆಕೋರ್ ಸಂಸ್ಥೆಯ ನಿರ್ದೇಶಕ ಶಶಾಂಕ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಕಲಾವಿದರ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.


ಮಂಗಳೂರು ಲಯನ್ಸ್ ಕ್ಲಬ್ ಅಧ್ಯಕ್ಷ ಡಾ. ಕೇದಿಗೆ ಅರವಿಂದ ರಾವ್ ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ರಘುವೀರ್ ರಾವ್, ನಾಗರಾಜ ಶರ್ಮ, ಗಾಯತ್ರಿ ಅರವಿಂದ ರಾವ್, ಗಾಯತ್ರಿ ಶರ್ಮ, ಡಾ. ಅಂಜಲಿ ರಾವ್ ಮತ್ತಿತರು ಉಪಸ್ಥಿತರಿದ್ದರು.

ಕೇದಿಗೆ ವಂಶದ ಕಲಾವಿದರಾದ ಲಕ್ಷ್ಮಿ ಭಾಸ್ಕರ ರಾವ್, ಗಾಯತ್ರಿ ಶರ್ಮ, ರಾಜೇಶ್ವರಿ ಆರ್. ರಾವ್, ರಾಜೇಂದ್ರ ಕೇದಿಗೆ, ವರುಣ್ ಕೇದಿಗೆ, ಡಾ. ಅಂಜಲಿ ರಾವ್, ಅನನ್ಯಾ ರಾವ್, ಹೇಮಾ ಸುರೇಶ್ ಹೆಬ್ಬಾರ್ ಇವರು ರಚಿಸಿದ ಕಲಾಕೃತಿಗಳು ಹಾಗೂ ವಸಂತ ಕೇದಿಗೆಯವರ ಛಾಯಾಚಿತ್ರಗಳು ಪ್ರದರ್ಶನಗೊಂಡವು.

ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ದಿನಾಂಕ 01-04-2013ರಂದು ಭಾಸ್ಕರ ಸಂಸ್ಮರಣೆ ನಡೆಯಿತು. ನಮ್ಮವರೇ ಆದ, ಗೋವಿಂದ ದಾಸ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಕೃಷ್ಣಮೂರ್ತಿಯವರು ಭಾಸ್ಕರ ರಾಯರು ಬರೆದ 'ಜ್ಞಾನಜ್ಯೋತಿ' ಮತ್ತು 'ದಶಾವತಾರ ಅಮರವಾಣಿ ಎಂಬ ಲೇಖನಗಳ ಬಗ್ಗೆ ವಿಚಾರಮಂಥನ ನಡೆಸಿದರು. ನಂತರ ಖ್ಯಾತ ಭಾಷಣಕಾರರೂ, ನ್ಯಾಯವಾದಿಗಳೂ ಆದ ಶ್ರೀ ಎ. ಎಸ್. ಎನ್. ಹೆಬ್ಬಾರ್ ಇವರಿಂದ 'ನಗೆಹಬ್ಬ' ಕಾರ್ಯಕ್ರಮ ನಡೆಯಿತು.

## ಪುಣ್ಯಸ್ಮರಣೆ

15-07-1926



01-04-2010

ಕೇದಿಗೆ ಭಾಸ್ಕರ ರಾವ್

**ನಮ್ಮೆಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ಸಲಹಿ ಉತ್ತಮ ಮಾರ್ಗದರ್ಶನಗೈದ ನಿಮ್ಮ ನೆನಪು ಸದಾ ಹಸಿರು.**

ಲಕ್ಷ್ಮೀ ಭಾಸ್ಕರ ರಾವ್ (ಪತ್ನಿ)
ಗಾಯತ್ರಿ ಮತ್ತು ಡಾ. ಕೇದಿಗೆ ಅರವಿಂದ ರಾವ್
ರೂಪ ರಾಣಿ ಮತ್ತು ಕೇದಿಗೆ ವಸಂತ ರಾವ್
ರೇಖಾ ಮತ್ತು ಕೆ. ಜಯಂತ್ ರಾವ್
ರೇಖಾ ಮತ್ತು ರಾಜೇಂದ್ರ ಕೇದಿಗೆ
ಜ್ಯೋತಿ ಮತ್ತು ಕೆ. ಪ್ರತಾಪ್ ರಾವ್
ಗಾಯತ್ರಿ ಶರ್ಮ, ಬೆಂಗಳೂರು
ಕಮಲಜ ಮತ್ತು ರಾಜಶೇಖರ್, ಮೈಸೂರು
ಶಕುಂತಳ ಮತ್ತು ಡಾ. ಯಾಜಿ. ನಿರಂಜನ್ ಹೆಚ್. ಉಡುಪಿ
ರಾಜೇಶ್ವರಿ ಮತ್ತು ರಮಾನಂದ ರಾವ್, ಕುಡುಪು
ಮೊಮ್ಮಕ್ಕಳು ಮತ್ತು ಮರಿಮಕ್ಕಳು

# ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು (ನೈಜ ಘಟನೆ)

ಲೇಖನ : **ಶ್ರೀಮತಿ ಸೀತಾದೇವಿ ಭಾಸ್ಕರ ರಾವ್**
ನಿವೃತ್ತ ಶಿಕ್ಷಕಿ, ಪಡುಬಿದ್ರಿ.

ನಮ್ಮೂರಿನ ಭೋಜ ಪೂಜಾರಿಯವರು ಮುಂಬಯಿಯಲ್ಲಿ ಚಿಕ್ಕ ಕ್ಯಾಂಟೀನ್ ಒಂದನ್ನು ನಡೆಸುತ್ತಿದ್ದರು. ಹಲವಾರು ವರ್ಷಗಳಿಂದ ಕಷ್ಟಪಟ್ಟು ಕೂಡಿಟ್ಟ ಹಣದಿಂದ ಊರಲ್ಲಿರುವ ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಸುವ ನಿರ್ಧಾರ ಮಾಡಿದರು. ಅಂತೆಯೇ ಪುರೋಹಿತರನ್ನು ಕರೆಯಿಸಿ ಒಂದು ಶುಭ ಮುಹೂರ್ತದಲ್ಲಿ ಕೆಸರು ಕಲ್ಲು ಹಾಕುವ ಕಾರ್ಯಕ್ರಮವೂ ನಡೆಯಿತು. ಹೊಸ ಮನೆ ನಿರ್ಮಾಣವಾಗುವ ತನಕ ಊರಲ್ಲಿಯೇ ಚಿಕ್ಕ ಬಾಡಿಗೆ ಮನೆಯೊಂದಕ್ಕೆ ತಮ್ಮ ವಾಸ ಸ್ಥಾನವನ್ನು ಬದಲಿಸಿದರು. ಮನೆ ಕಟ್ಟಿಸುವ ಜವಾಬ್ದಾರಿಯನ್ನು ತಮ್ಮ ಅಳಿಯನಿಗೆ ವಹಿಸಿದ್ದರು. ಅತೀ ಬಡತನದಲ್ಲಿ ಜೀವನ ನಡೆಸುತ್ತಿದ್ದ ಭೋಜ ಪೂಜಾರಿಯವರು ನಾಲ್ಕು ಕಾಸು ಸಂಪಾದನೆ ಮಾಡಿ ಹೊಸ ತಾರಸಿ ಮನೆ ಕಟ್ಟುವ ವಿಚಾರ ಕೆಲವರಿಗೆ ಸಂತಸದ ಸಂಗತಿಯಾದರೆ ರೂಢಿಯಂತೆ ಇನ್ನು ಕೆಲವರಿಗೆ ಸಹಿಸಲಾಗದ ವಿಚಾರವಾಗಿತ್ತು. ಅಂತೂ ಮನೆ ನಿರ್ಮಾಣದ ಕೆಲಸ ಆರಂಭವಾಯಿತು. ಕಟ್ಟಡ ನಿರ್ಮಾಣಕ್ಕೆ ಬೇಕಾದ ಇಲ್ಲಿ, ಕಲ್ಲು, ಮರಳು ಮೊದಲಾದ ಸಾಮಾನುಗಳನ್ನು ಲಾರಿಯಲ್ಲಿ ತಂದು ರಾಶಿ ಹಾಕಲಾಗಿತ್ತು.

ಗೋಡೆ ಕಟ್ಟುವ ಕೆಲಸ ಆರಂಭವಾಗಿ ಒಂದು ವಾರ ಕಳೆದಿರಬಹುದು ರವಿವಾರದ ರಜೆ ಕಳೆದು ಸೋಮವಾರ ಕೆಲಸದಾಳುಗಳು ಬಂದು ಇನ್ನೇನು ಕೆಲಸ ಆರಂಭಿಸಬೇಕು ಎನ್ನುವಷ್ಟರಲ್ಲಿ ಮರಳು ತರಲು ಮರಳಿನ ರಾಶಿಯ ಬಳಿ ಹೋದ ಕೆಲಸದಾಳು ಗಾಬರಿಗೊಂಡು ಮೇಸ್ತ್ರಿಯ ಬಳಿ ಓಡಿ ಬಂದ. ಕಾರಣ ಮರಳಿನ ರಾಶಿಯ ಮಧ್ಯೆ ಸಿಪ್ಪೆ ಇರುವ ಎರಡು ಒಣ ತೆಂಗಿನ ಕಾಯಿಗಳನ್ನು ಹೂತಿಡಲಾಯಿತ್ತು. ತೆಂಗಿನ ಕಾಯಿಗಳನ್ನು ನೋಡಿದ್ದೇ ತಡ ಯಾರೋ ಭೋಜ ಪೂಜಾರಿಯವರಿಗೆ ಆಗದವರು ಮತ್ಸರದಿಂದ ಅವರು ಮನೆ ಕಟ್ಟದಂತೆ ತೆಂಗಿನ ಕಾಯಿಯಲ್ಲಿ ಮಾಟ ಮಂತ್ರ ಮಾಡಿ ಮರಳಿನ ರಾಶಿಯಲ್ಲಿ ಹೂತಿಟ್ಟಿದ್ದಾರೆ ಎಂಬ ನಿರ್ಧಾರವನ್ನು ಅಲ್ಲಿದ್ದವರೆಲ್ಲಾ ಸೇರಿ ನಿರ್ಧರಿಸಿಯೂ ಆಯಿತು. ಈ ವಿಚಾರ ತನ್ನಿಂದ ತಾನೇ ಊರೆಲ್ಲಾ ಹಬ್ಬಿತು. ಮರಳಿನ ರಾಶಿಯಿಂದ ತೆಂಗಿನಕಾಯಿಯನ್ನು ಹೊರತೆಗೆಯುವ ಧೈರ್ಯ ಸಾಲದೆ ಕೆಲಸವನ್ನು ಅರ್ಧಕ್ಕೇ ನಿಲ್ಲಿಸಲಾಯಿತು. ಮುಂಬಯಿಯಲ್ಲಿದ್ದ ಭೋಜ ಪೂಜಾರಿಯವರಿಗೂ ಅವರ ಅಳಿಯನ ಮೂಲಕ ವಿಷಯ ತಿಳಿಸಿ ಅವರನ್ನು ಊರಿಗೆ ಬರಮಾಡಲಾಯಿತು.

ಗಾಬರಿಗೊಂಡ ಪೂಜಾರಿಯವರು ಊರಿಗೆ ಬರುವ ಮೊದಲೇ ಬಹಳ ಹೆಸರು ವಾಸಿಯಾದ ಜ್ಯೋತಿಷ್ಯರನ್ನು ಭೇಟಿ ಮಾಡಿದರು. ಸದ್ರಿ ಜ್ಯೋತಿಷ್ಯರು ತಮ್ಮ ಕವಡೆ ಶಾಸ್ತ್ರದ ಆಧಾರದಿಂದ ಪೂಜಾರಿಯವರಿಗೆ ಆಗದವರು ಮತ್ಸರದಿಂದ ಗೃಹ ನಿರ್ಮಾಣಕ್ಕೆ ವಿಘ್ನ ಬರುವಂತೆ ದುಷ್ಟ ಶಕ್ತಿಗಳನ್ನು ತೆಂಗಿನ ಕಾಯಿಯಲ್ಲಿ ಆಮಂತ್ರಿಸಿ ಮರಳಿನ ರಾಶಿಯಲ್ಲಿ ಹೂತಿಟ್ಟಿರುವುದು ನಿಜ. ಇನ್ನು ಅದನ್ನು ತೆಗೆಸದೆ ಕೆಲಸ ಮುಂದುವರಿಸಿದಲ್ಲಿ ಯಜಮಾನನ ಪ್ರಾಣಕ್ಕೇ ಅಪಾಯವಿದೆ ಎಂದು ತಿಳಿಸಿಯೇ ಬಿಟ್ಟರು. ಮಾಟ ತೆಗೆಸದೆ ಕೆಲಸ ಮುಂದುವರಿಸುವಂತಿಲ್ಲ, ತೆಗೆಯಬೇಕಾದರೆ ಸುಮಾರು ರೂ.25,000 ಖರ್ಚಾಗುವುದು. ಕೊನೆಗೂ ದಾರಿ ಕಾಣದೆ ಪ್ರಸಿದ್ಧ ಮಾಂತ್ರಿಕರನ್ನು ಕರೆಯಿಸಿ ಮರಳಿನ ರಾಶಿಯಿಂದ ಎರಡೂ ತೆಂಗಿನ ಕಾಯಿಗಳನ್ನು ಹೊರ ತೆಗೆದು ಮಾಟ ತೆಗೆಯಲಾಯಿತು. ಅಂತೂ ಭೋಜ ಪೂಜಾರಿಯವರು ನಿರಾಳವಾಗಿ ಮನೆ ನಿರ್ಮಾಣದ ಕಾರ್ಯವನ್ನು ಮುಂದುರಿಸುವಂತಾಯಿತು.

ಇಲ್ಲಿದೆ ನೋಡಿ ಈ ಘಟನೆಯ ತಿರುಳು. ಇದಾಗಿ ನಾಲ್ಕು ದಿನ ಕಳೆದಿರಬಹುದು. ನಮ್ಮೂರಿನ ಅಲೆಮಾರಿ ಹುಚ್ಚ ತಿಮ್ಮ ಮುಸ್ಸಂಜೆ ಹೊತ್ತಿನಲ್ಲಿ ಪೂಜಾರಿಯವರ ನಿರ್ಮಾಣ ಹಂತದಲ್ಲಿರುವ ಮನೆಯ ಮುಂದಿನ ಮರಳಿನ ರಾಶಿಯಲ್ಲಿ ಕೆದಕಿ ಕೆದಕಿ ಏನೋ ಕಳೆದು ಹೋದ ವಸ್ತುವನ್ನು ಹುಡುಕುತ್ತಿದ್ದ. ಇದನ್ನು ಕಂಡ ಪಕ್ಕದ ಮನೆಯ ಅಜ್ಜಿ ನಾಗಮ್ಮ ವಿಚಾರಿಸಿದಾಗ ಆತ ತೊದಲುತ್ತಾ ವಾರದ ಹಿಂದೆ ಅಲ್ಲೇ ಪಕ್ಕದಲ್ಲಿರುವ ಶಾಲೆಯ ಮೈದಾನದ ತೆಂಗಿನ ಮರದ ಬುಡದಲ್ಲಿ ಬಿದ್ದ ಎರಡು ಒಣ ತೆಂಗಿನ ಕಾಯಿಗಳನ್ನು ತಂದು ಮರಳಿನ ರಾಶಿಯಲ್ಲಿ ತಾನು ಮುಚ್ಚಿಟ್ಟಿದ್ದನೆಂದೂ, ಈಗ ಅದನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆ ಎಂದು ಜೋರಾಗಿ ಅಳಲು ಆರಂಭಿಸಿದ. ಅಷ್ಟರಲ್ಲಿ ಒಂದಷ್ಟು ಜನ ಗುಂಪು ಸೇರಿಯೂ ಆಯಿತು. ಜನರ ಗುಂಪು ನೋಡಿದ ತಿಮ್ಮನ ಬೊಬ್ಬೆಯೂ ಹೆಚ್ಚಾಯಿತು. ಕೊನೆಗೆ ಆತನ ಬಗ್ಗೆ ಮನ ಕರಗಿದ ಅಜ್ಜಿ ತೆಂಗಿನ ಕಾಯಿ ತಾನು ತೆಗೆದೆನೆಂದು ಹೇಳಿ ತನ್ನ ಮನೆಯಿಂದ ಎರಡು ಒಣ ತೆಂಗಿನ ಕಾಯಿಗಳನ್ನು ಆತನ ಕೈಗಿತ್ತು ಆತನನ್ನು ಸಾಗ ಹಾಕಿದಳು. ಅಂತೂ ಹುಚ್ಚ ಮಾಡಿದ ತಪ್ಪಿಗೆ ಭೋಜ ಪೂಜಾರಿಯವರು ಮಾಂತ್ರಿಕನಿಗೆ ರೂ.25,000 ದಂಡ ತೆರಬೇಕಾಯಿತು. ಅದಕ್ಕೇ ತಿಳಿದವರು ಹೇಳುವ ಮಾತು ''ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು'' ಎಂದು. 'ಅವಸರದಿಂದ ದುಡುಕಿ ಯಾವ ನಿರ್ಧಾರವನ್ನು ತೆಗೆದುಕೊಳ್ಳಬೇಡ' ಕಪಟ ಮಾಂತ್ರಿಕರನ್ನು ನಂಬಿ ಮೋಸ ಹೋಗದಿರಿ.

## ನಮನ

॥ನಮನಾ ನಮನ, ನಮನಾ ನಮನ॥
ಹೆತ್ತ ತಾಯಿಗಿದೋ ನಮನ.
ಹೊತ್ತಭೂಮಿಗಿದೋ ನಮನ.
ಸೇವಿಸಿದ ಗಾಳಿಗಿದೋ ನಮನ.
ಕುಡಿದ ನೀರಿಗಿದೋ ನಮನ ॥೧॥

॥ನಮನಾ ನಮನ॥
ಬೆಳಗಿನ ಸೂರ್ಯನಿಗಿದೋ ನಮನ.
ತಂಪಗಿನ ಚಂದ್ರನಿಗಿದೋ ನಮನ.
ಹನಿದ ನೀರೊಗಿದೋ ನಮನ
ಹನಿಸಿದ ಗಗನಕಿದೋ ನಮನ ॥೨॥

॥ನಮನ ನಮನಾ॥
ಆಡಿದ ಮಾತಿಗಿದೋ ನಮನ
ನಡೆದ ಕಾರ್ಯಕಿದೋ ನಮನ
ಕಲಿತ ವಿದ್ಯೆಗಿದೋ ನಮನ
ಕಲಿಸಿದ ಗುರುವಿಗಿದೋ ನಮನ॥೩॥

॥ನಮನ ನಮನಾ॥
ಭಾರತೀಯರ ಶಕ್ತಿಗಿದೋ ನಮನ
ಭಾರತಿಯರ ಭಕ್ತಿಗಿದೋ ನಮನ
ಪಡೆದ ಧೈರ್ಯಕಿದೋ ನಮನ
ನೀಡಿದ ಆತ್ಮಕಿದೋ ನಮನ॥೪॥

॥ನಮನ ನಮನಾ॥
ಕಲಿತ ಪ್ರೇಮಕಿದೋ ನಮನ
ನೀಡಿದ ಗೆಳತಿಗಿದೋ ನಮನ
ಕಲಿತ ಶಾಲೆಗಿದೋ ನಮನ
ಕಲಿಸಿದ ನಾಡಿಗಿದೋ ನಮನ॥೫॥


॥ನಮನ ನಮನಾ॥
ಬರೆದ ಕವಿಗಿದೋ ನಮನ
ಬರೆಸಿದ ಕಾವ್ಯಕಿದೋ ನಮನ
ಬರೆದ ಬರಹಕಿದೋ ನಮನ
ಬರೆಸಿದ ಸಂಸ್ಥೆಗಿದೋ ನಮನ ॥೬॥

॥ನಮನ ನಮನಾ॥
ಕಲ್ಲಿಗಿದೋ ನಮನ
ಕೆತ್ತಿದ ಶಿಲ್ಪಿಗಿದೋ ನಮನ
ಅಂದದ ಮೂರ್ತಿಗಿದೋ ನಮನ
ಚಂದದ ದೇಗುಲಕಿದೋ ನಮನ॥೭॥

॥ನಮನ ನಮನಾ॥
ಆನಿಸಿದ ಜನ್ಮಕಿದೋ ನಮನ
ನೀಡಿದ ಅಂತರಂಗಕಿದೋ ನಮನ
ಬೇಡಿದ ಭಕ್ತಿಗಿದೋ ನಮನ
ಕೊಡಿಸಿದ ತ್ರಿಶಕ್ತಿಗಿದೋ ನಮನ॥೮॥
॥ನಮನ ನಮನಾ॥

**–ಕ.ಸು.ಶ್ರೀ.**

# ಕನ್ನಡ ಕವಿಕಾವ್ಯ ಪರಿಚಯ-೬ : ನೃಪತುಂಗ



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ಸುಮಾರು 2 ಸಾವಿರ ವರ್ಷಗಳ ಇತಿಹಾಸ ಕನ್ನಡ ಭಾಷೆಗಿದೆ ಆದರೆ ಕನ್ನಡದಲ್ಲಿ ಕಾವ್ಯರಚನೆ ಪ್ರಾರಂಭವಾದುದು ಸುಮಾರು ಕ್ರಿ.ಶ.6ನೇ ಶತಮಾನದಿಂದ. ಅಲ್ಲಿಯವರೆಗೆ ಕರ್ನಾಟಕದ ಎಲ್ಲೆಡೆಯಲ್ಲಿ ಶಿಲಾಶಾಸನಗಳ ಮೇಲೆ ನಾವು ಕನ್ನಡ ಬರಹಗಳನ್ನು ಕಾಣಬಹುದು. ಆ ಕಾಲದ ಅಕ್ಷರಗಳ ವಿನ್ಯಾಸವು ಸ್ವಲ್ಪ ಬೇರೆಯೇ ರೀತಿಯಲ್ಲಿತ್ತು. ನಂತರದ ಸಮಯದಲ್ಲಿ ಬರೆಯಲು ಭೂರ್ಜ್ವಾ ಪತ್ರಗಳು (ಒಂದು ಜಾತಿಯ ಮರದ ಎಲೆ) ಮತ್ತು ಮರದ ತೊಗಟೆಗಳು ಬಳಕೆಯಲ್ಲಿದ್ದವು. ಕ್ರಮೇಣ ಓಲೆ ಗರಿಗಳ ಮೇಲೆ ಕಬ್ಬಿಣದ ಕಡ್ಡಿಯಿಂದ ಬರೆಯುವ ಕ್ರಮ ಆರಂಭವಾಯಿತು. ಅಲ್ಲಿಂದ ದಾಖಲೆಯಲ್ಲಿ ಕನ್ನಡ ಕಾವ್ಯ, ಕೃತಿಗಳು ದೊರಕತೊಡಗಿದುವು. ಕನ್ನಡ ಭಾಷೆಯಲ್ಲಿ (1) ಪೂರ್ವದ ಹಳೆಗನ್ನಡ, (2) ಹಳೆಗನ್ನಡ, (3) ನಡುಗನ್ನಡ, (4) ಹೊಸಗನ್ನಡ ಹೀಗೆ ವಿಭಾಗಗಳನ್ನು ಮಾಡಬಹುದು. ಪೂರ್ವದ ಹಳೆಗನ್ನಡದಲ್ಲಿ ಬರೆಯಲ್ಪಟ್ಟ 'ವಡ್ಡಾರಾದನೆ' ಎಂಬ ಕೃತಿಯ ಬಗ್ಗೆ ಮುಂದೆ ಹೇಳಲಾಗುತ್ತದೆ.


ಪ್ರಸ್ತುತ, ಕರ್ನಾಟಕದ 'ನೂನ್ಯಖೇಟ' ಎಂಬಲ್ಲಿಂದ ರಾಜ್ಯಭಾರ ಮಾಡಿದ ಚಕ್ರವರ್ತಿ ರಾಷ್ಟ್ರಕೂಟ ವಂಶದ ನೃಪತುಂಗನು ಸ್ವತಾಹಾ ಮಹಾಕವಿಯೇ ಆಗಿದ್ದನು. ಅವನ ಕುರಿತಾದ ವಿವರಣೆಯಿದು–ಇವನು ಬರೆದ ಕಾವ್ಯವು 'ಕವಿರಾಜ ಮಾರ್ಗ' ಎಂಬುದು. ಕವಿಗಳಿಗೆ ಬೇಕಾದ ಮಾರ್ಗದರ್ಶನವನ್ನು ನೀಡುವಂಥ ಕಂದಪದ್ಯ, ಗದ್ಯಗಳಿಂದ ಕೂಡಿದ ಗ್ರಂಥವಿದು:–

*ಕಾವೇರಿಯಿಂದಂ ಗೋ–1*
*ದಾವರಿವರಮಿರ್ದ ನಾಡದಾ ಕನ್ನಡದೊಳ್॥*
*ಭಾವಿಸಿದ ಜನಪದಂ ವಸು।*
*ಧಾವಳಯವಲೀನ ವಿಷದ ವಿಷಯ ವಿಶೇಷಂ॥*

*ಎಂಬಲ್ಲಿ ಕನ್ನಡ ನಾಡಿನ ವಿಸ್ತಾರವನ್ನು ತಿಳಿಸಿದ್ದಾನೆ ಅಲ್ಲದೆ–*

*ಪದನರಿದು ನುಡಿಯಲು ನುಡಿ–।*
*ದುದನರಿದಾರಯಿಮಾರ್ಪರಾ ನಾಡವರ್ಗಳ್।*
*ಚದುರರ್ ನಿಜದಿಂ ಕುರಿ– ಕೋ।*
*ದದೆಯಂ ಕಾವ್ಯ ಪ್ರಯೋಗ ಪರಣತ ಮತಿಗಳ್॥*

ಕನ್ನಡ ಜನತೆಯ ಬುದ್ಧಿವಂತಿಕೆ, ಚತುರತೆಗಳನ್ನು ಕುರಿತು ಹೇಳುತ್ತಾನೆ. ಅಲಂಕಾರ, ಛಂದಸ್ಸು, ಕಾವ್ಯಯ ರಚನೆಯ ಕ್ರಮ ಇತ್ಯಾದಿಗಳ ಕುರಿತಾಗಿ ಹೇಳಿ ಕವಿಗಳಿಗೆ ರಾಜ ಮಾರ್ಗದಂತಿರುವ ಗ್ರಂಥವಿದು. ಇವನ ಆಸ್ಥಾನದಲ್ಲಿದ್ದ ಶ್ರೀವಿಜಯ ಎಂಬ ವಿದ್ಯಾಂಸನಿದನ್ನು ಬರೆದನೆಂದು ಕೆಲವರನ್ನುತ್ತಾರೆ. ಆದರೆ ಇದನ್ನು ಚಕ್ರವರ್ತಿ ನೃಪತುಂಗನೇ ಬರೆದನೆಂಬುದಕ್ಕೆ ದಾಖಲೆಗಳಿವೆ.



## ಅಗಸ್ತ್ಯೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿ ಕೆ. ಉಮೇಶ ಶ್ಯಾನುಭೋಗ್

ಕಿರಿಮಂಜೇಶ್ವರ ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ನೂತನ ಅಧ್ಯಕ್ಷರಾಗಿ ಸತತ 3ನೇ ಬಾರಿಗೆ ಶ್ರೀ ಕೆ. ಉಮೇಶ್ ಶ್ಯಾನುಭೋಗರು ಆಯ್ಕೆಯಾಗಿರುತ್ತಾರೆ. ಶ್ರೀಯುತರು ಹಿಂದಿನ 2 ಅವಧಿಯಲ್ಲಿ ಈ ದೇವಸ್ಥಾನದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಅಲ್ಲದೇ ಉಡುಪಿಯಲ್ಲಿ ನಡೆದ ಸ್ಥಾನಿಕ ಸಮಾವೇಶ ಸಮಿತಿಯ ಅಧ್ಯಕ್ಷರಾಗಿದ್ದು ಸಮಾವೇಶದ ಯಶಸ್ಸಿಗೆ ಸಹಕರಿಸಿದ್ದಾರೆ. ಮುಂದೆ ಇವರ ಆಡಳಿತಾವಧಿಯಲ್ಲಿ ಶ್ರೀ ದೇಗುಲವು ಸರ್ವಾಂಗೀಣ ಅಭಿವೃದ್ಧಿ ಹೊಂದಲಿ ಎಂದು ಹಾರೈಸುತ್ತೇವೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

# ಹೀಗೊಂದು ಸಾಂಪ್ರದಾಯಿಕ ಮದುವೆ

-ಸಾವಿತ್ರಿ ಮನೋಹರ್ ಕಾರ್ಕಳ

''ಶುಕ್ಲಾಂಬರಧರಂ ವಿಷ್ಣುಂ'' ಪುರೋಹಿತರ ಮಂತ್ರ ತಾರಕ ಸ್ವರಕ್ಕೆ ಏರಿದಾಗ ಅಮ್ಮ ಅವಸರದಿಂದ 'ಸೀತಾ ಸ್ನಾನಕ್ಕೆ ಬಾ' ಎಂದಳು. ಐದು ಜನ ಮುತ್ತೈದೆಯರು ಸೀತಾಳನ್ನು ದೇವರ ಮುಂದೆ ಕೂರಿಸಿ ಎಣ್ಣೆ ಮೆತ್ತಿದರು. ಅಕ್ಕನ ಪಕ್ಕ ಕುಳಿತ ನಾನು ಕಲಶಗಿತ್ತಿ ನನಗೂ ಎಣ್ಣೆ ಮೆತ್ತಿದಾಗ ಅಸಹ್ಯವೆನಿಸಿತು.

ದೇವರ ಬಳಿಯಿಂದ ನಮ್ಮನ್ನು ಬಾತ್‌ರೂಮಿಗೆ ಕರೆದೊಯ್ದರು ಸೀತಾಳನ್ನು ಪಾಪ ಯಾವಾಗಲೂ ಬಾತ್‌ರೂಮಿನ ಬಾಗಿಲು ಭದ್ರ ಪಡಿಸಿಕೊಂಡು ಸ್ನಾನ ಮಾಡುತ್ತಿದ್ದವಳನ್ನು ಇಂದು ಐದು ಜನ ಹೆಂಗಸರು ಸ್ನಾನ ಮಾಡಿಸುವಾಗ ಅವಳು ನಾಚಿಕೆಯಿಂದ ಮುದುರಿ ಹೋದದ್ದು ಕಂಡು ಅಯ್ಯೊ ಎನಿಸಿತು.

ಸ್ನಾನದ ನಂತರ ಒದ್ದೆ ತಲೆಯಲ್ಲಿಯೇ ಕರೆತಂದು ಭಾರೀ ರೇಷ್ಮೆ ಸೀರೆ ಉಡಿಸಿದರು. ಅವಳು ಕೂದಲಿನಿಂದ ಇಳಿಯುತ್ತಿದ್ದ ನೀರಿನಿಂದ ಹೊಸ ಸೀರೆ ಒದ್ದೆಯಾಗುವುದನ್ನು ಕಂಡಾಗ ಸೀರೆ ಹಾಳಾಗುವುದಲ್ಲಾ ಎನ್ನಿಸಿತು.

ತೀರಾ ಬಡವರಲ್ಲದಿದ್ದರೂ ಶ್ರೀಮಂತರಲ್ಲದ ನಮಗೆ ಕಾಲೇಜಿಗೆ ನನ್ನ ತಿಂಗಳ ಫೀಸು ಕಟ್ಟುವಾಗಲೇ ಕುತ್ತಿಗೆಗೆ ಬರುತ್ತಿದ್ದ ಕಾಲ ಆದರೂ ಅಪ್ಪ ವೈಭವದಿಂದ ಅಕ್ಕನ ಮದುವೆಗಾಗಿ ಖರ್ಚು ಮಾಡುವುದು ಕಂಡಾಗ ಅಪ್ಪನ ಬಗೆಗೆ ವಿಸ್ಮಯವಾಗುತ್ತಿತ್ತು. ಸಾಲ ಮಾಡಿ ಖರೀದಿಸಿದ ಅಭರಣಗಳಿಂದ ಸೀತಾಳನ್ನು ಶೃಂಗರಿಸಿದರು. ಸೀತಾ ನನ್ನತ್ತ ನೋಡಿದಳು. ಅವಳ ಕಣ್ಣು ತುಂಬಾ ನೀರು; ಹತ್ತಿರ ಹೋಗಿ 'ಯಾಕಕ್ಕಾ ಅಳ್ತಿ?' ಅಂದೆ ಸೀತಾ. ''ಅಪ್ಪ ನನಗಾಗಿ ಎಷ್ಟು ಹಣ ಖರ್ಚು ಮಾಡುತ್ತಿದ್ದಾರೆ, ಸಾಲ ತೀರಿಸಲೇ ಅವರ ಸಂಬಳವೆಲ್ಲಾ ಖರ್ಚಾದಂತೆ ನಿನ್ನ ಕಾಲೇಜಿನ ಕಥೆ ಹೇಗೆ? ಈ ಮದುವೆಗಾಗಿ ಎಷ್ಟೊಂದು ಕಷ್ಟಗಳು'' ಎಂದು ನನ್ನನ್ನಪ್ಪಿ ಕೊಂಡು ಬಿಕ್ಕಳಿಸಿದಳು. ನಾನು ಅವಳನ್ನು ಸಂತೈಸಿದೆನಾದರೂ ನನ್ನ ಒಳ ಮನಸ್ಸು ಕೇಳುತ್ತಿತ್ತು ಈ ಅಡಂಬರ ಏಕೆ? ಈ ಸಂಪ್ರದಾಯಗಳಿಂದ ಏನು ಪ್ರಯೋಜನ?

ಸೀತಾ ಮೌನ ಗೌರಿ ಪೂಜೆ ಆರಂಭಿಸು ಎಂದಳು ಅಮ್ಮ. 'ಗಂಡಿನ ಕಡೆಯವರು ಬರೋ ಹೊತ್ತಾಯ್ತು ಪೂಜೆ ಆರಂಭಿಸಮ್ಮಾ' ಎಂದಳು ಗಿರಿಜತ್ತೆ.

ಎಲ್ಲರೂ ಅಂಗಳಕ್ಕೆ ಧಾವಿಸಿದರು. ಬೀಗರನ್ನು ಎದುರುಗೊಂಡು ಕರೆತರುವ ಸಂಭ್ರಮದಲ್ಲಿ ಮುಳುಗಿದರು. ನಾನು ಪಕ್ಕದ ರೂಮಿನಲ್ಲಿ ತಲೆ ಬಾಚಿಕೊಳ್ಳುತ್ತಾ ಕಿಟಕಿಯಿಂದ ಹೊರಕ್ಕೆ ನೋಟ ಹರಿಸಿದೆ. ಎರಡೂ ಕಡೆಯ ಜನರು ಮುಷ್ಟಿಯಲ್ಲಿದ್ದ ಅರಳು- ಅಕ್ಷತೆ ಕಾಳುಗಳನ್ನು ಪರಸ್ಪರ ಎರಚುತ್ತಿದ್ದರು. ರಾಶಿ ರಾಶಿ ಬಿದ್ದ ಅರಳು ಕಂಡ ಪುಟ್ಟ ಹುಡುಗನೊಬ್ಬ ಅತ್ತಿತ್ತ ನೋಡಿ, ಬಿದ್ದ ಅರಳನ್ನು ಹೆಕ್ಕಿ ತಿನ್ನತೊಡಗಿದ ಆಸೆಯಿಂದ. ಅದನ್ನು ಕಂಡಾಗ ನನಗೆ ಛೇ ಇಷ್ಟೊಂದು ತಟ್ಟೆ ಅರಳನ್ನು ಎಸೆಯುವ ಬದಲು ಸಾಂಕೇತಿಕವಾಗಿ ನಾಲ್ಕು ಕಾಳು ಎಸೆದು ಉಳಿದುದನ್ನು ಪುಟ್ಟ ಮಕ್ಕಳಿಗೆ ಹಂಚಿದ್ದರೆ ಎಷ್ಟು ಚೆನ್ನಾಗಿತ್ತು ಎಲ್ಲಾ ತುಳಿದು ಹಾಳು ಮಾಡ್ತಿದ್ದಾರೆ ಸಂಪ್ರದಾಯದ ಹೆಸರಿನಲ್ಲಿ ಎನಿಸಿತು.

''ನನ್ನ ರೇಷ್ಮೆ ಶಾಲು ಎಲ್ಲೊಯ್ತು?'' ಎಂಬ ಅಪ್ಪನ ಅರಚುವಿಕೆಯಿಂದ ನನ್ನ ಯೋಚನಾ ಸರಣಿ ಕಡಿಯಿತು. ದೇವರ ಕೋಣೆಯಲ್ಲಿ ಅಪ್ಪ ಅಮ್ಮನಿಗೆ ಬಯ್ಯುತ್ತಿದ್ದರು. ''ಇಲ್ಲೇ ಪೆಟ್ಟಿಗೆ ಮೇಲಿಟ್ಟದ್ದ ಶಾಲು ಎಲ್ಲಿ ಹಾಕಿದಳೋ ದರಿದ್ರದವಳು. ಅಲ್ಲೇ ಕುಳತು ಮೌನವಾಗಿ ಗೌರಿ ಪೂಜೆ ಮಾಡುತ್ತಿದ್ದ ಸೀತಾ ಕುಳಿತಲ್ಲೇ ಚಡಪಡಿಸಿದಳು. ಅವಳು ಏಳುವಂತಿಲ್ಲ- ಪೂಜೆ ನಿಲ್ಲಿಸುವಂತೆಯೂ ಇಲ್ಲ- ಪೇಚಾಡಿದಳು ಕುಳಿತಲ್ಲೇ ತಂದೆಯ ಬಯ್ಗಳು ಸಾಗಿಯೇ ಇತ್ತು, ಪೆಟ್ಟಿಗೆಯೊಳಗಿನ ಬಟ್ಟೆಯೆಲ್ಲಾ ಹೊರಗೆ ಬಂದಿತ್ತು.

ಸೀತಾಗೆ ಒಂದು ಉಪಾಯ ಹೊಳೆಯಿತು. ತಂದೆಯ ಗಮನ ಸೆಳೆಯಲು ದೇವರ ಮಂಟಪದಲ್ಲಿದ್ದ ಗಂಟೆ ತೆಗೆದು ಗಣಗಣ ಬಾರಿಸತೊಡಗಿದಳು. ಗಂಟೆ ಸದ್ದು ಕೇಳಿ ಹಲವಾರು ದೇವರ ಕೋಣೆಗೆ ನುಗ್ಗಿದರು. ಮೂಹೂರ್ತ ಅರಂಭವಾಯ್ತೆಂದು ನಾನು ಗಡಿಬಿಡಿಯಿಂದ ಓಡಿ ಬಂದೆ, ತಂದೆ ಏನಾಯ್ತೆ ನಿನಗೆ? ಎಂದು ಸೀತಾಳ ಬಳಿ ಬಂದಾಗ ಸೀತಾ ಕುಳಿತಲ್ಲೇ ಸ್ವಲ್ಪ ಓರೆಯಾಗಿ ತಾನು ಕುಳಿತ ಶಾಲು ತೋರಿಸುತ್ತಿದ್ದಳು.ತಂದೆ ಸಿಟ್ಟಿನಿಂದ ಅದನ್ನು ಆಗಲೇ ಹೇಳಬಾರದಿತ್ತೆ? ಎಂದು ರೇಗಿದರು. ಅದರೆ ಮೌನ ಗೌರಿ ಪೂಜೆ ಮಾಡುತ್ತಿದ್ದ ಸೀತಾ ಹೇಳುವುದಾದರೂ ಹೇಗೆ? ವಿಚಾರ ತಿಳಿದಾಗ ಅಲ್ಲದ್ದವರೆಲ್ಲಾ ಬಿದ್ದು ಬಿದ್ದು ನಕ್ಕರು. ಪಾಪ ಸೀತಾ ತಾನು ಹಾಗೆ ಮಾಡಬಾರದಿತ್ತೇನೋ ಎಂದು ನಾಚಿ ನೀರಾದಳು.

ಗ್ರಹಶಾಂತಿ ಕಾರ್ಯಮುಗಿಸಿ ಪುರೋಹಿತರು ವರನನ್ನು ಮಂಟಪಕ್ಕೆ ಕರೆತಂದರು. ಪುರೋಹಿತರು ಮಂತ್ರ ಆರಂಭಿಸಿ 'ಅಚಮನ ಮಾಡಪ್ಪ' ಎಂದರು. ಮಂತ್ರ ಮರೆತು ಗಾಯತ್ರಿ ಘಟ್ಟ ಹತ್ತಿಸಿ, ಸಂಧ್ಯಾವಂದನೆ ಸಂಧಿಯಲ್ಲಿ ಬಿಟ್ಟ ಭೂಪತಿ ವರ ಕೂಡಲೇ ಎದ್ದು ಹೋದ ಅವರಿಗೆ ಬಿಡದಿ ಕೊಟ್ಟಿದ್ದ ಅಚೆ ಮನೆಗೆ. ಎಲ್ಲರೂ ವಿಸ್ಮಯದಿಂದ ನೋಡುತ್ತಿರು ವಾಗಲೇ ವರ ಮರಳಿ ಬಂದ. ಅಲ್ಲಾ ಅಚಮನ ಮಾಡು ಎಂದರೆ ಎಲ್ಲಿಗೆ ಹೋಗಿದ್ದೆ? ಬೇಗ ಅಚಮನ ಮಾಡು ಎಂದರು ಮತ್ತೆ ಪುರೋಹಿತರು.

''ಆಚೆ ಮನೆಗೆ ಹೋಗಿ ಬಂದಾಯ್ತಲ್ಲಾ ಭಟ್ರೆ'', ಎಂದು ವರ ಮಹಾಶಯ ಹೇಳಿದಾಗ ಮಂಟಪದಲ್ಲಿ ನಗೆಗಡಲುಕ್ಕಿ ಹರಿಯಿತು. ಅಲ್ಲಾ ಈ ನಾಸ್ತಿಕ ಶಿಖಾಮಣಿಗೆ ನಮ್ಮ ತಂದೆ ಮದುಪರ್ಕ ಅಂತ ಬೆಳ್ಳಿ ತಟ್ಟೆ, ಬೆಳ್ಳಿ ಪಂಚಪಾತ್ರೆ, ಬೆಳ್ಳಿ ತಂಬಿಗೆ, ಬೆಳ್ಳಿ ವಿಗ್ರಹಗಳನ್ನು ಕೊಟ್ರಲ್ಲಾ ಮಂತ್ರ ತಿಳಿಯದ, ಅಚಮನ ಮಾಡಲರಿಯದ ಅಳಿಯ ಪೂಜೆ ಮಾಡ ಬಲ್ಲನೇ ಈ ಸಂಪ್ರದಾಯ ಇರುವುದಾದರೂ ಏಕೆ?

ಅದ್ದೂರಿಯ ಮದುವೆ ಮುಗಿಯಿತು. ವರ್ಷ ಆರು ಕಳೆದರೂ ಅಪ್ಪನ ಸಾಲ ತೀರಿಲ್ಲ. ಇಂತಹ ಅಡಂಬರ ಸಂಪ್ರದಾಯ ಅನಗತ್ಯ ವೈಭವ ಅಗತ್ಯವೇ? ಇದಕ್ಕೆಲ್ಲಾ ಯೋಚಿಸಲು ಹಿರಿಯರಿಗೆ ವ್ಯವಧಾನವಿಲ್ಲವೇ? ಇದ್ದರೂ ಪರಿಹಾರದ ಮನಸ್ಸಿಲ್ಲವೇ? ಯೋಚಿಸುತ್ತಲೇ ಇದ್ದೇನೆ. ಇಂದಿಗೂ ಸಮಸ್ಯೆ ತಲೆಯಲ್ಲಿ ಸುತ್ತುತ್ತಲೇ ಇದೆ.

# ಕಡಬದಲ್ಲಿ ಮನೆ-ಮನೆ, ವೇದ,ರುದ್ರ ಪಾರಾಯಣ

ಪುತ್ತೂರು ತಾಲೂಕಿನ ಕಡಬದಲ್ಲಿ ಅರುಣ ಕುಮಾರ್ ಜೆಡೆಮನೆ ಇವರ ಮನೆಯಲ್ಲಿ 6 ತಿಂಗಳ ಹಿಂದೆ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರಿಗೆಂದು ವೇದಪಾಠ ಶಾಲೆಯೊಂದನ್ನು ತೆರೆಯಲಾಗಿತ್ತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರು ಈ ತರಬೇತಿ ಶಾಲೆಯನ್ನು ಉದ್ಘಾಟಿಸಿ ಶುಭ ಹಾರೈಸಿದರು. ಶ್ರೀ ಅಜೇಯ ಶರ್ಮಾ ಇವರ ಗುರುಗಳಾಗಿ ಮಾರ್ಗದರ್ಶನ ನೀಡುತ್ತಿದ್ದಾರೆ. ಇದೀಗ 2ನೇ ಹಂತವಾಗಿ ಕಡಬದಲ್ಲಿರುವ ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘದ ವತಿಯಿಂದ ಸಮಾಜ ಬಾಂಧವರ ಮನೆಗಳಲ್ಲಿ ಪ್ರತೀ ಶನಿವಾರ ಸಂಜೆ ವಾರಕ್ಕೊಂದು ಮನೆಯಲ್ಲಿ ವೇದ, ರುದ್ರ ಪಾರಾಯಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಾರೀಕು 23 ರಂದು ಪುತ್ರಬೈಲು ಯಂ. ಸೀತಾರಾಮ ರಾಯರ ಮನೆಯಿಂದ ಆರಂಭಿಸಿದ ಈ ಕಾರ್ಯಕ್ರಮವನ್ನು ಪ್ರಸಿದ್ಧ ನ್ಯಾಯವಾದಿ ಹಾಗೂ ಪುತ್ತೂರು ಶಿವ ಬ್ರಾಹ್ಮಣ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಎನ್.ಕೆ. ಜಗನ್ನಿವಾಸರಾವ್ ಉದ್ಘಾಟಿಸುತ್ತಾ ಈ ರೀತಿ ಎಲ್ಲಾ ಊರುಗಳಲ್ಲಿ ಸ್ಥಾನಿಕ ಬ್ರಾಹ್ಮಣರು ಕಲಿತು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ತಿಳಿಸಿದರಲ್ಲದೆ, ಇದರಿಂದ ಮಕ್ಕಳು ಕೂಡಾ ಪ್ರಭಾವಿತರಾಗಿ ತಾವೂ ಕಲಿತು ಬ್ರಾಹ್ಮಣ್ಯವನ್ನು ಉಳಿಸಿಕೊಂಡು ಮುಂದುವರಿಯಲು ಸಹಕಾರಿಯಾಗುವುದೆಂದು ತಿಳಿಸುತ್ತಾ ಶುಭ ಹಾರೈಸಿದರು. ಕಡಬ ಸಂಘದ ಅಧ್ಯಕ್ಷರಾದ ಕೋಲ್ಪೆ ಗೋಪಾಲಕೃಷ್ಣ ರಾವ್ ಪ್ರಾಸ್ತಾವಿಕ ಮಾತು ಹೇಳಿ ಸ್ವಾಗತಿಸಿದರು. ಕಾರ್ಯದರ್ಶಿ ಅರುಣ ಕುಮಾರ್ ಜೆಡಿಮನೆ ಧನ್ಯವಾದ ಅರ್ಪಿಸಿದರು. ಕಡಬ ಗೋಪಾಲ ರಾವ್ ಕಾರ್ಯಕ್ರಮ ನಿರೂಪಿಸಿದರು. ಮಕ್ಕಳು ಯುವಕರು, ಹಿರಿಯರು ಸೇರಿ ಸುಮಾರು 20ಕ್ಕೂ ಹೆಚ್ಚು ಮಂದಿ ಇದರಲ್ಲಿ ಭಾಗವಸಿದ್ದರು.

# ಸಂಗೀತ ವಿದುಷಿ ಅನೀಶಾ ರಾವ್

ಮೈಸೂರಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿರುವ ಶ್ರೀ ಅಂಬಲಪಾಡಿ ರಾಘವೇಂದ್ರ ರಾವ್ ಮತ್ತು ಶ್ರೀಮತಿ ವಾಣಿ ಇವರ ಸುಪುತ್ರಿ ಕು।ಅನೀಶಾ ರಾವ್ ಕಳೆದ ಅಕ್ಟೋಬರ್ ತಿಂಗಳಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ಶಾಸ್ತ್ರೀಯ ಸಂಗೀತದ ವಿದ್ವತ್ ಅಂತಿಮ ವಿಭಾಗದ ಪರೀಕ್ಷೆಯಲ್ಲಿ ಶೇ. ೮೦ ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿರುತ್ತಾಳೆ. ಇವಳು ಉಡುಪಿ-ಅಂಬಲಪಾಡಿಯ ಸಂಗೀತ ವಿದುಷಿ ಶ್ರೀಮತಿ ವಾರಿಜಾಕ್ಷಿ ಆರ್. ಭಟ್ ಹಾಗೂ ಮೈಸೂರಿನ ಡಾ॥ಸುಕನ್ಯ ಪ್ರಭಾಕರ್ ಇವರ ಶಿಷ್ಯೆಯಾಗಿರುತ್ತಾಳೆ.

ಪ್ರಸ್ತುತ ಬೆಂಗಳೂರಿನ ಇನ್ಫೋಸಿಸ್ ಲಿಮಿಟೆಡ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಈಕೆ ಸಂಗೀತ



ಕಾರ್ಯಕ್ರಮಗಳನ್ನು ಕೊಡುವುದರ ಜೊತೆಗೆ ಬಿಡುವಿನ ವೇಳೆಯಲ್ಲಿ ಹತ್ತಾರು ಮಕ್ಕಳಿಗೆ ಸಂಗೀತ ಶಿಕ್ಷಣವನ್ನೂ ನೀಡುತ್ತಿದ್ದಾಳೆ ಕು। ಅನೀಶಾ ಸಾಧನೆಗಾಗಿ ಶ್ರೀ ಶಾರದಾ ಅಭಿನಂದನೆಗಳು.




RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS

Buying and selling shares
as easy as checking your emails

Sharekhan Online Trading Account Features:

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಅಪ್ಪಯ್ಯನ ಶಾಲು

**-ವಿಮಲಾ ಪ್ರಭಾಕರ್,**
**ಯಲಹಂಕ ಉಪನಗರ, ಬೆಂಗಳೂರು**

ಶ್ರೀ ಶಾರದಾ ಪತ್ರಿಕೆಯ ಫೆಬ್ರವರಿ 2013ರ ಸಂಚಿಕೆಯಲ್ಲಿ ನನ್ನ ಸೀತಕ್ಕ ಅಮ್ಮನ ಸೀರೆಯ ಸೆರಗಿನ ಸೇವೆಯ ಬಗೆಯನ್ನು ಬಣ್ಣಿಸಿದುದನ್ನು ಓದಿ ಅಮ್ಮನ ನೆನಪಾಗಿ ಕಣ್ಣು ಮಂಜಾಗುವುದರ ಜೊತೆಗೇ ಅಮ್ಮನ ಸೀರೆಯ ಸೆರಗಿಗೆ ಸ್ಪರ್ಧಾತ್ಮಕ ಸವಾಲೊಡ್ಡಿದ್ದ ಇನ್ನೊಂದು ವಸ್ತುವಿನ ನೆನಪಾಯ್ತು. ಅದೇ ''ಅಪ್ಪಯ್ಯನ ಶಾಲು''.

ಅಪ್ಪಯ್ಯ ಮಾಸಲು ಬಿಳಿ ಬಣ್ಣ ಅಥವಾ ಕೆನೆ ಬಣ್ಣದ ಸಣ್ಣ ಜರಿಯಂಚು ಇರುವ ಶಲ್ಯವನ್ನು ಹೆಗಲಿಗೆ ಹಾಕಿ ಕೊಳ್ಳದೇ ಹೊರಗೆ ಹೊರಡುತ್ತಲೇ ಇರಲಿಲ್ಲ. ಅದು ಹೆಗಲ ಮೇಲೆ ಇತ್ತೆಂದರೇನೇ ಅಪ್ಪಯ್ಯನಿಗೊಂದು ಗತ್ತುಗೈರತ್ತು! ಅಪ್ಪಯ್ಯನ ಶಾಲು ನಮ್ಮ ಜೀವನದಲ್ಲಿ ನೀಡಿದ್ದ ಸಾಂಗತ್ಯವನ್ನು ನಾನೀಗ ಮೆಲುಕು ಹಾಕಲು ಹೊರಟಿದ್ದೇನೆ. ಓದುಗರೇ, ನನ್ನ ಈ ಮೆಲುಕಾಟ ನಿಮ್ಮನ್ನು ಕೂಡಾ ಬಾಲ್ಯದ ಆ ದಿನಗಳಿಗೆ ಕರೆದೊಯ್ಯುತ್ತದೆ ಎಂದು ನಂಬಿದ್ದೇನೆ.

4 ವರ್ಷದವಳಿದ್ದಾಗ ಚಳಿ ಜ್ವರ ಬಂದು ಗಡ ಗಡ ನಡುಗುತ್ತಾ ಮಲಗಿದ್ದಾಗ ಅಪ್ಪಯ್ಯ ಬಂದು ತನ್ನ ಶಾಲನ್ನು ಮೈಮೇಲೆ ಹೊದಿಸಿದ್ದರು. ಆ ಶಾಲಿನಿಂದ ಹೊರ ಹೊಮ್ಮಿ ಮೂಗಿಗೆ ಬಡಿದಿದ್ದ ಅಪ್ಪಯ್ಯ ತಿನ್ನುತ್ತಿದ್ದ ಎಲೆ ಅಡಿಕೆ ಘಮ, ಪೂಜೆ ಮಾಡುವಾಗ ಹಚ್ಚಿಕೊಳ್ಳುತ್ತಿದ್ದ ಗಂಧದ ಘಮ, ದೇವಸ್ಥಾನದಲ್ಲಿ ಮಾಡಿಸಿದ್ದ ಹಣ್ಣು ಕಾಯಿ, ಪ್ರಸಾದದ ಕುಂಕುಮ, ಮಲ್ಲಿಗೆಗಳನ್ನು ಶಾಲಿನಲ್ಲಿ ಗಂಟು ಕಟ್ಟಿ ತಂದಿದ್ದ ಘಮ, ಆಯುರ್ವೇದ ಪಂಡಿತರಾಗಿದ್ದ ಅಪ್ಪಯ್ಯ ಅರೆಯುತ್ತಿದ್ದ ಸಪ್ತಾನಂದ ಭೈರವಿ, ಧನ್ವಂತರಿ ಮಾತ್ರೆಗಳ ಘಮ, ಅಪ್ಪಯ್ಯನ ಬೆವರು ವಾಸನೆ ಎಲ್ಲಾ ಸೇರಿ ಒಂದು ಹೊಸ ಘಮಲು ಹೊರ ಹೊಮ್ಮಿ ಮೂಗಿಗೆ ಅಡರಿ ಶ್ವಾಸಕೋಶ ಪ್ರವೇಶಿಸಿದಾಗ ನನಗೆ ತಿಳಿಯದಂತೆಯೇ ಸುಖ ನಿದ್ರೆ ಆವರಿಸಿ ಚಳಿ ಜ್ವರ ಓಡಿ ಹೋಗಿತ್ತು.

ಅಂದಿನಿಂದ ರಾತ್ರಿ ಮಲಗುವಾಗ ಹೊಚ್ಚಿಕೊಳ್ಳಲು ಅಪ್ಪಯ್ಯನ ಶಾಲು ಬೇಕು ಎಂದು ಹಟ ಮಾಡುತ್ತಿದ್ದೆ. ಒಮ್ಮೆ ಸುನಂದಾ ಟೀಚರ್ ''ಮಾಯಾ ಚಾಪೆಯ'' ಕತೆ ಹೇಳಿದ್ದರು. ಅದರಲ್ಲಿ ಕೂತು ಯಾವುದೋ ಮಂತ್ರ ಹೇಳಿ ಇಂತಹ ಕಡೆಗೆ ಹೋಗು ಎಂದು ಹೇಳಿದರೆ ಗಾಳಿಯಲ್ಲಿ ತೇಲುತ್ತಾ; ಹಾರುತ್ತಾ ಅಂತಹ ಕಡೆಗೆ ಕರೆದೊಯ್ಯುತ್ತಿತ್ತಂತೆ. ಅದೇ ದಿನ ನನ್ನ ಗೆಳತಿಯೊಬ್ಬಳು ರಜೆಯಲ್ಲಿ ಬೆಂಗಳೂರಿಗೆ ಹೋದುದನ್ನು, ಅಲ್ಲಿ ವಿಧಾನಸೌಧ, ಲಾಲ್‌ಬಾಗ್, ಕಬ್ಬನ್‌ಪಾರ್ಕ್ ನೋಡಿದುದನ್ನು ಬಣ್ಣಿಸಿ ಹೇಳಿದ್ದಳು. ಆ ದಿನ ರಾತ್ರಿ ಅಪ್ಪಯ್ಯನ ಶಾಲಿನಲ್ಲಿ ನಾನು ಕೂತು ಏನೋ ಮಂತ್ರ ಹೇಳಿ ಬೆಂಗಳೂರಿಗೆ ಹೋಗು ಎಂದು ಆಜ್ಞಾಪಿಸಿದ ಹಾಗೆ. ಅದು ಮೇಲಕ್ಕೇರಿ ಗಾಳಿಯಲ್ಲಿ ತೇಲುತ್ತಾ ಬೆಂಗಳೂರಿಗೆ ಹೋಗಿ ವಿಧಾನಸೌಧ, ಕಬ್ಬನ್‌ಪಾರ್ಕ್, ಲಾಲ್‌ಬಾಗ್ ಮೇಲೆ ಹಾರಾಡಿದ ಹಾಗೆ ಕನಸು ಬಿದ್ದಿತ್ತು. 25 ವರ್ಷದವಳಾದ ನಂತರ ವಿಧಾನಸೌಧದಲ್ಲೇ ಕೆಲಸ ಸಿಕ್ಕಿ, 35 ವರ್ಷ 4 ತಿಂಗಳ ಸುದೀರ್ಘ ಸೇವೆ ಸಲ್ಲಿಸಿ, ಮೊನ್ನೆ ಡಿಸೆಂಬರಿನಲ್ಲಿ ನಿವೃತ್ತಳಾದೆ. ಕನಸು ಹೇಗೆ ನನಸಾಯಿತು ನೋಡಿದಿರಾ!

ಅಮ್ಮ (ಕೋಟಲೆ) ಬಂದು ಮಲಗಿದ್ದಾಗ ''ಅಮ್ಮನಿಗೆ ತುಂಬಾ ಮಡಿಯಾಗಬೇಕು, ಸಿಕ್ಕ ಸಿಕ್ಕ ಬಟ್ಟೆಯಲ್ಲಿ ಮಲಗಿಸಿದರೆ ಅಮ್ಮನಿಗೆ ಮೈಲಿಗೆಯಾಗಿ ಸಿಟ್ಟು ಬಂದು ಕೋಟತಿ ಇನ್ನೂ ಜಾಸ್ತಿಯಾಗುತ್ತದೆ. ಗಂಡಸರ ಬಿಳಿ ಪಂಚೆಯಲ್ಲಿ ಮಲಗಿಸಿ'' ಅಂತ ಪಕ್ಕದ ಮನೆಯ ಭಟ್ರ ಹೆಂಡತಿ ಸುಮತಿ ಅಕ್ಕ ಹೇಳಿದಾಗ ನಮ್ಮಮ್ಮ ಅಪ್ಪಯ್ಯನ ಬಿಳೀ ಪಂಚೆಯನ್ನು ಹಾಸಿ ಅಪ್ಪಯ್ಯನ ಶಾಲನ್ನು ಹೊಚ್ಚಿಸಿ ಮಲಗಿಸಿದ್ದಳು. ಮರುದಿನವೇ 'ಕೋಟತಿ ಅಮ್ಮ' ಪರಾರಿ! ಆ ಶಾಲನ್ನು ಒಗೆದು ಹೆಗಲ ಮೇಲೆ ಹಾಕಿಕೊಂಡು ಅಪ್ಪಯ್ಯ ''ಗದ್ದುಗೆ ಪೂಜೆ'' ಹರಕೆಯನ್ನು ಮಾರಿಯಮ್ಮನಿಗೆ ಸಲ್ಲಿಸಿ ಪೂಜೆಯ ಪಂಚಕಜ್ಜಾಯವನ್ನು ಅದರ ತುದಿಯಲ್ಲಿ ಗಂಟು ಕಟ್ಟಿ ತಂದು ನಮಗೆಲ್ಲಾ ಹಂಚಿದ್ದರು.

ಸಂತೆಯ ದಿನ ಪೇಟೆಯಿಂದ ಬರುವಾಗ ಅಪ್ಪಯ್ಯ ಎರಡು ಸೇರು ಮಂಡಕ್ಕಿ ಖರೀದಿಸಿ ಶಲ್ಯದಲ್ಲಿ ಗಂಟು ಕಟ್ಟಿ ಹೆಗಲಿಗೆ ನೇತು ಹಾಕಿಕೊಂಡು ಬರುತ್ತಿದ್ದರು. ಗಂಟು ನೋಡಿದ ಕೂಡಲೇ ನಾನು ಮತ್ತು ಅಕ್ಕಂದಿರು ಲಂಗವನ್ನು ಚಾಚಿ ಹಿಡಿಯುತ್ತಿದ್ದೆವು. ಅಪ್ಪಯ್ಯ ಶಾಲಿನ ಗಂಟು ಬಿಚ್ಚಿ ಎರಡೆರಡು ಮುಷ್ಠಿ ಮಂಡಕ್ಕಿಯನ್ನು ನಮ್ಮ ಲಂಗಕ್ಕೆ ಹಾಕುತ್ತಿದ್ದರು. ತಮ್ಮಂದಿರ ಚಡ್ಡಿಯ ಜೇಬಿಗೆ ತುಂಬಿಸುತ್ತಿದ್ದರು. ಒಂದೇ ಸಲ ಮುಕ್ಕಿದರೆ ಬೇಗೆ ಖಾಲಿಯಾಗುತ್ತದೆ; ನಿಧಾನಕ್ಕೆ ಒಂದೊಂದೇ ತಿಂದರೆ ತುಂಬಾ ಹೊತ್ತು ರುಚಿ ಸವಿಯಬಹುದು ಎನ್ನುವುದಾಗಿ ಬಡತನ ಹೇಳಿಕೊಟ್ಟ ಪಾಠ ಇತ್ತಲ್ಲ! ಒಂದೋಂದೇ ಕಾಳು ಮಂಡಕ್ಕಿಯನ್ನು ಬಾಯಿಗೆ ಎಸೆಯುತ್ತಾ ಗಂಟೆಗಟ್ಟಲೆ ಸವಿಯುತ್ತಿದ್ದೆವು. ಅದೇ ಮಂಡಕ್ಕಿಯನ್ನು ಈಗ ಸಿಟಿಯಲ್ಲಿ ಚಾಟ್ ಸೆಂಟರ್‌ಗಳಲ್ಲಿ ಏನೇನೋ ಮಸಾಲೆ ಹಾಕಿ ಬೇಲ್‌ಪುರಿ, ಮಸಾಲಾ ಪುರಿ ಅಂತ ಮಾರುತ್ತಾರೆ. ಆದರೆ ಆಗಿನ ಆ ರುಚಿ ಇವಕ್ಕೆ ಇಲ್ಲವೇ ಇಲ್ಲ.

ಸ್ಕೂಲ್‌ಡೇಯಲ್ಲಿ ಆಡಿದ್ದ ''ಭಕ್ತ ಕುಚೇಲ'' ನಾಟಕದಲ್ಲಿ ತಮ್ಮನದು ಕುಚೇಲನ ಪಾತ್ರ. ಬಡ ಕುಚೇಲ ಕೃಷ್ಣನನ್ನು ನೋಡಲು ಹೋಗುವಾಗ ಒಂದು ಮುಷ್ಠಿ ಅವಲಕ್ಕಿಯನ್ನು ತನ್ನ ಶಲ್ಯದಲ್ಲಿ ಗಂಟು ಕಟ್ಟಿಕೊಂಡು ಹೋಗುವ ದೃಶ್ಯಕ್ಕೆ ಅಪ್ಪಯ್ಯನ ಶಾಲನ್ನೇ ತಮ್ಮ ಬಳಸಿದ್ದ. ಅಪ್ಪಯ್ಯನ ಶಾಲಿನಲ್ಲಿ ಗಂಟು ಕಟ್ಟಿದ್ದ ಅವಲಕ್ಕಿಯನ್ನು ತಿಂದಿದ್ದ ಕೃಷ್ಣ ಪಾತ್ರಧಾರಿ, ಅವಲಕ್ಕಿಯ ಚಿತ್ರ ವಿಚಿತ್ರ ಘಮಲಿಗೆ ಮೂರ್ಛೆ ಹೋಗುವುದೊಂದು ಬಾಕಿ ಇತ್ತು!

ನಾವು ಮಕ್ಕಳು ಸೇರಿಕೊಂಡು ಆಡುತ್ತಿದ್ದ ಮದುವೆ ಆಟದಲ್ಲಿ ಮದುಮಗ, ಮದುಮಗಳು ಮಾಲೆ ಹಾಕುವಾಗ ಮಧ್ಯೆ ಹಿಡಿಯುವ ಅಂತರ್‌ಪಟ, ಯಕ್ಷಗಾನ ಬಯಲಾಟದ ರಾಕ್ಷಸ ಪಾತ್ರಧಾರಿಯ ರಂಗ ಪ್ರವೇಶಕ್ಕೆ ಅಡ್ಡ ಹಿಡಿಯುವ ರಂಗ ವಸ್ತ್ರ ಇವಕ್ಕೆಲ್ಲ ಅಪ್ಪಯ್ಯನ ಶಾಲೇ ಬೇಕಿತ್ತು.

ಊರಿನಲ್ಲಿ ನಡೆಯುವ ಮದುವೆಗಳಲ್ಲಿ ಊರ ದೈವಗಳ ಕೋಲ ನೇಮಗಳಲ್ಲಿ ದೇವರ ತೇರು ಜಾತ್ರೆಗಳಲ್ಲಿ ಹೆಗಲ ಮೇಲೊಂದೇ ಶಾಲೆ, ತಲೆಗೊಂದು ಮುಂಡಾಸು ಕಟ್ಟಿಕೊಂಡರೆ ಹಳ್ಳಿಯ ಹತ್ತು ಸಮಸ್ತರಲ್ಲಿ ನಮ್ಮ ಅಪ್ಪಯ್ಯನೂ ಒಬ್ಬರು.

ಅಪ್ಪಯ್ಯನ ಶಲ್ಯದ ತುದಿಗೂ ಅಮ್ಮನ ಸೀರೆಯ ಸೆರಗಿನ ತುದಿಗೂ ಗಂಟು ಹಾಕಿ, ಸಪ್ತಪದಿ ತುಳಿಸಿ ನಂಟು ಬೆಸೆದು ನಮ್ಮನ್ನು ಈ ನಂಟಿನೊಳಗೆ ಅಂಟು ಹಾಕಿದ ಭಗವಂತ, ಇವರಿಬ್ಬರ ನಂಟಿನಿಂದ ನಮ್ಮನ್ನು ದೂರ ಮಾಡಿ ಸುಮಾರು 28 ವರ್ಷಗಳಾಯಿತು.

ನನ್ನ ಬಾಂಧವರೇ, ಈಗ ಮಲಗಲು ಮಂಚ, ಅದರ ಮೇಲೆ ಸುಪ್ಪತ್ತಿಗೆ, ಹೊದ್ದುಕೊಳ್ಳಲು ಹಕ್ಕಿಯ ತುಪ್ಪಳದಂತೆ ನವಿರಾದ ಹಚ್ಚಡ, ಮೇಲೆ ತಿರುಗುವ ಫ್ಯಾನು ಎಲ್ಲಾ ಇದೆ. ಆದರ ಅತ್ತ ಇತ್ತ ಹೊರಳಾಡುತ್ತಾ ಹಾಗೆ ಹೀಗೆ ನರಳಾಡುತ್ತಾ ರಾತ್ರಿ ಎರಡು ಗಂಟೆಯಾದರೂ ನಿದ್ದೆ ಹತ್ತುವುದಿಲ್ಲ. ಕೊನೆಗಾಲದಲ್ಲಿ ಅಪ್ಪಯ್ಯ, ಅಮ್ಮ ತಮ್ಮನ ಬಳಿ ಇದ್ದರು. ಬರುವ ತಿಂಗಳು ಅಪ್ಪಯ್ಯನ ಶ್ರಾದ್ಧವಂತೆ. ಬರಲು ತಿಳಿಸಿದ್ದಾನೆ ತಮ್ಮ. ಅಪ್ಪಯ್ಯನ ಶಾಲಿನ, ಅಮ್ಮನ ಸೀರೆಯ ಸೆರಗಿನ ಒಂದು ಚೂರಾದರೂ ಅವನ ಮನೆಯಲ್ಲಿ ಸಿಗಬಹುದಾ ಎಂದು ಹುಡುಕಿ ನೋಡಲಾ? ಸಿಕ್ಕರೆ ಅದನ್ನು ಮೂಗಿನ ಮೇಲೆ ಇಟ್ಟುಕೊಂಡು ಘಮಲು ಹೀರುತ್ತಾ ಮಲಗಿರೆ ಆ ಘಮಕ್ಕೆ ಸುಖ ನಿದ್ರೆ ಬರಬಹುದಾ? ಯಾಕೋ ಬೇಜಾರಾಗುತ್ತಿದೆ.

ಓದುಗರೇ ನಿಮಗೂ ಇಂತಹದೇ ನೆನಪು ಕಾಡುತ್ತದೆಯಾ? ದಯವಿಟ್ಟು ತಿಳಿಸಿ...


## ವೈವಾಹಿಕ ಜೀವನದ 25ನೇ ವರುಷಕ್ಕೆ ಶುಭಾಶಯಗಳು



**ಬಿ. ರಮೇಶ್ ಮತ್ತು ಶ್ರೀಮತಿ ಶೋಭಾ ರಾವ್**

ದುರ್ಗಾನಿಲಯ, ಉಗ್ಗಬೆಟ್ಟು, ಬಾಂಬಿಲ, ವಗ್ಗ

ವೈವಾಹಿಕ ಜೀವನದ 25ನೇ ಮಹೋತ್ಸವವನ್ನು ಆಚರಿಸುತ್ತಿರುವ
ಈ ಸಂದರ್ಭದಲ್ಲಿ ಹಾರ್ದಿಕ ಶುಭಾಶಯ ಸಲ್ಲಿಸುವ

**ಬಿ. ಶಾರದಾದೇವಿ (ತಾಯಿ) ಮತ್ತು ಮಕ್ಕಳು, ಮೊಮ್ಮಕ್ಕಳು, ದುರ್ಗಾಸದನ ಕಾವಳಕಟ್ಟೆ**

**ಶ್ರೀ ಬಿ.ಎಸ್.ವರದರಾಜ ರಾವ್ ಮತ್ತು ಶ್ರೀಮತಿ ಶ್ಯಾಮಲ ರಾವ್**

**ಹಾಗೂ ಸಹೋದರ ಸಹೋದರಿಯರು, 'ಕನಕ ಶ್ರೀನಿವಾಸ', ಕಾರಜೆ, ನಗ್ರಿ**

**ಬಿ. ಸಂದೇಶ, ಬಿ.ಸಂಕೇತ (ಮಕ್ಕಳು)**

## ವಿಳಾಸ ಬದಲಾವಣೆ

**T. SUBRAHMANYA RAO**
No.650, Arya Arcade, S.F.1,
9th Main, 4th Cross,
BSK 1st Stage, Srinivasanagara,
Bangalore-560050.

## ಸೀಮಂತೋನ್ನಯನ

ಉಡುಪಿಯಲ್ಲಿರುವ ಶ್ರೀ ವೈ. ಭುವನೇಂದ್ರ ರಾವ್ ಮತ್ತು ಶ್ರೀಮತಿ ಜಯಶ್ರೀಯವರ ಪುತ್ರ ಅಜಿತ್ ವೈ. ಇವರ ಧರ್ಮಪತ್ನಿ ಶ್ರೀಮತಿ ಅರ್ಚನಾರ ಸೀಮಂತ ಶಾಸ್ತ್ರವು ತಾ.31-3-2013 ರಂದು ಬೆಂಗಳೂರಿನ ಕೊಡಿಗೆಹಳ್ಳಿಯಲ್ಲಿರುವ ಜ್ಞಾನಶಕ್ತಿ ಮಂಟಪದಲ್ಲಿ ಜರುಗಿತು.

## ನಿಧನ

### ಸನತ್ ರಾವ್

ಅಲಂಕಾರ್‌ನಲ್ಲಿರುವ ಬೊಕ್ಕಸ ಜಯರಾಮ ರಾವ್ ಮತ್ತು ಜ್ಯೋತಿಯವರ ಪುತ್ರ ಶ್ರೀ ಸನತ್ ರಾವ್ ತಾ.21-2-13 ರಂದು ನಿಧನರಾದರು. ಟಿವಿ9ನ ವರದಿಗಾರರಾಗಿದ್ದ ಇವರಿಗೆ 23 ವರ್ಷ ಪ್ರಾಯ. ಇವರು ತಂದೆ, ತಾಯಿ, ಒಬ್ಬಳು ಸಹೋದರಿಯನ್ನು ಅಗಲಿದ್ದಾರೆ.

★★★ ★★★

### ಟಿ. ಜಯರಾಮ ರಾವ್

ಬೆಂಗಳೂರಿನ ಚಾಮರಾಜ ಪೇಟೆ ವಿಠಲನಗರದಲ್ಲಿರುವ ಟಿ. ಜಯರಾಮ ರಾವ್‌ರವರು 24-03-2013 ರಂದು ನಿಧನ ರಾದರು. ಅವರು ಪತ್ನಿ, 3 ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

★★★ ★★★

### ಎಂ. ಸುಬ್ರಹ್ಮಣ್ಯ ಶಾಸ್ತ್ರಿ

ಮುಂಬೈ ವಿಲೆಪಾರ್ಲೆಯ ಜುಹು (ಪಶ್ಚಿಮ) ನಿವಾಸಿ ಶ್ರೀ ಎಂ. ಸುಬ್ರಹ್ಮಣ್ಯ ಶಾಸ್ತ್ರಿ(82)ಯವರು ತಾ.03-04-2013ರಂದು ಮುಂಬೈಯ ಆಸ್ಪತ್ರೆಯಲ್ಲಿ ನಿಧನರಾದರು. ಮೂಲತಃ ಕದ್ರಿಯವರಾದ ಇವರು ವಿಶ್ವವಿಖ್ಯಾತ ಕ್ರಿಕೆಟಿಗನಾದ ರವಿಶಾಸ್ತ್ರಿಯವರ ಚಿಕ್ಕಪ್ಪ. ಇವರು ಪತ್ನಿ, ಪುತ್ರ ಹಾಗೂ ಅಪಾರಬಂಧುಗಳನ್ನು ಅಗಲಿರುತ್ತಾರೆ.

★★★ ★★★

### ಶ್ರೀಮತಿ ಚಂದ್ರಮಣಿ ರಾವ್

ದಿ। ಪರಾರಿ ಗುಂಡೂರಾಯರ ಧರ್ಮಪತ್ನಿ ಶ್ರೀಮತಿ ಚಂದ್ರಮಣಿ ರಾವ್ (88) ಅಸೌಖ್ಯದಿಂದ ಮಂಗಳೂರು ಕದ್ರಿಯಲ್ಲಿರುವ ತಮ್ಮ ಹಿರಿಯ ಪುತ್ರ ಶ್ರೀ ರಾಮ್ ಪ್ರಸಾದ್ ರಾವ್ ಇವರ ಮನೆಯಲ್ಲಿ ತಾ.31-03-2013ರಂದು ನಿಧನರಾದರು. ಇವರು ಮೂವರು ಪುತ್ರರು, ಐವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

## ಮೇಷ ಮಾಸದ ವಿಶೇಷ ದಿನಗಳು

| | |
|---|---|
| 14-04-2013 | **ಸೌರ ಯುಗಾದಿ** |
| 22-04-2013 | **ಸರ್ವೇಕಾದಶೀ** |
| 23-04-2013 | **ಪ್ರದೋಷ:** |
| 25-04-2013 | **ಪೂರ್ಣಿಮಾ, ಚಂದ್ರ ಗ್ರಹಣ** |
| 27-04-2013 | **ಭರಣೀ ನಕ್ಷತ್ರಾರಂಭ** |
| 28-04-2013 | **ಸಂಕಷ್ಟ ಚತುರ್ಥಿ** ಚಂದ್ರೋದಯ ರಾತ್ರಿ 9.32ಕ್ಕೆ |
| 05-05-2013 | **ಸರ್ವೇಕಾದಶೀ** |
| 07-05-2013 | **ಪ್ರದೋಷ:** |
| 10-05-2013 | **ಅಮವಾಸ್ಯಾ** |
| 11-05-2013 | **ಕೃತಿಕಾ ನಕ್ಷತ್ರಾರಂಭ** |
| 13-05-2013 | **ಅಕ್ಷಯ ತೃತೀಯಾ** |
| 14-05-2013 | **ವೃಷಭ ಸಂಕ್ರಮಣ** |

## ಉಪನಯನ

### ಚಿ। ಮಿಥಿಲ್

ಶ್ರೀಮತಿ ಸುಶೀಲಮ್ಮ ಮತ್ತು ಕೀರ್ತಿಶೇಷ ಬೆಳ್ಳೆ ಶ್ರೀನಿವಾಸ ರಾಯರ ಪೌತ್ರ ಚಿ। ಮಿಥಿಲ್ (ಶ್ರೀಮತಿ ಅನುಪಮಾ ಮತ್ತು ಶ್ರೀ ಬೆಳ್ಳೆ ರಾಜಶೇಖರರಾಯರ ಪುತ್ರ)ನ ಬ್ರಹ್ಮೋಪದೇಶವು ತಾ.29-3-2013 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಜರಗಿತು.

★★★ ★★★

### ಚಿ। ಶೈಲೇಶ್

ಶ್ರೀಮತಿ ಪ್ರಸನ್ನ ಮತ್ತು ಶ್ರೀ ಕಟಪಾಡಿ ಶಿವರಾಯರ ಪೌತ್ರ ಚಿ। ಶೈಲೇಶ್ (ಶ್ರೀಮತಿ ಶಾರದಾ ಮತ್ತು ಗಣೇಶ ರಾಯರ ಪುತ್ರ)ನ ಬ್ರಹ್ಮೋಪದೇಶವು ತಾ.11-4-2013ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಜರಗಿತು.

## ಪದೋನ್ನತಿ



ಇದುವರೆಗೆ Sate Bank of Mysoreನ ಬೆಂಗಳೂರಿನ ಹೆಡ್ ಆಫೀಸಿನಲ್ಲಿ Manager ಆಗಿ ಕೆಲಸ ಮಾಡುತ್ತಿದ್ದ ಪಡುಬಿದ್ರಿ ಅನಂತರಾಮ ಶಾಸ್ತ್ರಿ ಇವರು ಅದೇ ಬ್ಯಾಂಕಿನ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ TFCPC ಶಾಖೆಗೆ CHIEF MANAGER ಆಗಿ ಪದೋನ್ನತಿ ಹಾಗೂ ವರ್ಗಾವಣೆ ಹೊಂದಿ ಡಿಸೆಂಬರ್ 10, 2012ರಿಂದ ಅಧಿಕಾರ ಸ್ವೀಕರಿಸಿದ್ದಾರೆ. ಈ ಹಿಂದಿನ ಪ್ರಮೋಶನ್‌ನಲ್ಲಿ ಇವರಿಗೆ ಮುಂಬೈಗೆ ಟ್ರಾನ್ಸ್‌ಫರ್ ಆಗಿ ಅಲ್ಲಿ 3 ವರ್ಷ ಕೆಲಸ ಮಾಡಿದ್ದನ್ನು ಸ್ಮರಿಸಬಹುದು. ಇವರು ದಿ। ಪದ್ಮನಾಭ ಶಾಸ್ತ್ರಿ ಪಡುಬಿದ್ರಿ ಇವರ 3ನೇ ಮಗ ಹಾಗೂ ಅಲೆವೂರಿನ 'ನವನೀತಾ' ಗೃಹದಲ್ಲಿ ವಾಸಿಸುತ್ತಿರುವ ಕೆ. ದೇವರಾಯ ಶಾಸ್ತ್ರಿ ಇವರ ಕಿರಿಯ ಸಹೋದರ ಆಗಿರುತ್ತಾರೆ. ಇವರು ಇದುವರೆಗೆ ಬ್ಯಾಂಕಿನ ಎಲ್ಲಾ ಹಂತದ ಪ್ರಮೋಶನ್‌ನಲ್ಲಿ ಒಂದೇ ಪ್ರಯತ್ನದಲ್ಲಿ ಪ್ರಮೋಶನ್ ಪಡೆದ ದಾಖಲೆ ಹೊಂದಿರುತ್ತಾರೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಸ್ಕ್ಯಾನಿಂಗ್ (scanning) ಮಾಡುವುದು ಎಂದರೇನು? ಇದರ ಉಪಯೋಗಗಳೇನು?**

ಉತ್ತರ : ನಮ್ಮ ದೇಹವನ್ನು ತಲೆ ಎದೆ ಹಾಗೂ ಹೊಟ್ಟೆಯೆಂಬ ಮೂರು ಕುಹರಗಳು ಹಾಗೂ ಎರಡು ಕೈಗಳು ಹಾಗೂ ಎರಡು ಕಾಲುಗಳು ಎಂದು ವಿಭಾಗಿಸಿಕೊಳ್ಳಬಹುದು. ಈ ಮೂರು ಕುಹರಗಳಲ್ಲಿ ಹಲವಾರು ಅಂಗಗಳಿವೆ. ಕೈಕಾಲುಗಳಲ್ಲಿರುವುದು ಎಲುಬು, ಅದನ್ನಾವರಿಸಿ ಹಲವಾರು ಮಾಂಸಖಂಡಗಳು ಹಾಗೂ ಮೇಲೆ ಚರ್ಮದ ಹೊದಿಕೆ ಇದೆ. ಈ ಚರ್ಮವು ಎಲ್ಲಾ ದೇಹದ ಭಾಗಗಳನ್ನು ಆವರಿಸಿಕೊಂಡಿದೆ. ಚರ್ಮವು ದೇಹದ ಎಲ್ಲಾ ಭಾಗಗಳನ್ನು ಆವರಿಸಿರುವುದರಿಂದ ನಾವು ನಮ್ಮ ದೇಹದ ಒಳಭಾಗಗಳನ್ನು ಕಾಣಲಾರೆವು. ಚರ್ಮದ ಹೊದಿಕೆಯ ಒಳಗಿರುವ ಎಲ್ಲಾ ಅಂಗಗಳನ್ನು ವಿವಿಧ ವೈದ್ಯಕೀಯ ಉಪಕರಣಗಳ ಮೂಲಕ ಪರೀಕ್ಷಿಸುವುದನ್ನು ಸ್ಕ್ಯಾನಿಂಗ್ ಎಂದು ಕರೆಯುತ್ತೇವೆ. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, C.T. (computerized tomography) ಹಾಗೂ M.R.I (magnetic resonance imaging) ಇವು ಮೂರು ಅತ್ಯಂತ ಬಳಕೆಯಲ್ಲಿರುವ ಸ್ಕ್ಯಾನಿಂಗ್ ಉಪಕರಣಗಳು.

ಯಾವುದೇ ಸ್ಕ್ಯಾನಿಂಗ್ ಯಂತ್ರದಲ್ಲಿ ಸ್ಕ್ಯಾನಿಂಗ್ ಮಾಡುವ ಉಪಕರಣವನ್ನು ರೋಗಿಯ ದೇಹದ ಮೇಲಿಟ್ಟಾಗ ಅದು ಕೆಲವು ಕಿರಣ(rays)ಗಳನ್ನು ಅಥವ ತರಂಗಗಳನ್ನು (wave) ಆ ಭಾಗದ ಚರ್ಮದ ಮುಖಾಂತರ ನೇರವಾಗಿ ದೇಹದ ಒಳಗೆ ಕಳಿಸುತ್ತದೆ. ಈ ಕಿರಣಗಳು ಅಥವಾ ತರಂಗಗಳು ಒಳಗಿರುವ ದೇಹದ ಅಂಗಕ್ಕೆ ಬಡಿದು ಹಿಂದೆ ಬರುತ್ತವೆ. ಆದರೆ ದೇಹದ ವಿವಿಧ ಅಂಗಗಳ ಹಾಗೂ ಅಂಗಾಂಶಗಳ ಸಾಂದ್ರತೆ ಬೇರೆ ಬೇರೆ ಇರುವುದರಿಂದ (ಉದಾಹರಣೆಗೆ ಹೊಟ್ಟೆಯಲ್ಲಿ ಪಿತ್ತಜನಕಾಂಗದ, ಪಿತ್ತಕೋಶದ, ಮೇದೋಜೀರಕ ಗ್ರಂಥಿಯ, ಕಿಡ್ನಿಯ ಹೀಗೆ ಬೇರೆ ಬೇರೆ ಅಂಗಗಳ ಸಾಂದ್ರತೆ ಬೇರೆ ಬೇರೆ ಇರುತ್ತದೆ), ಈ ಸಾಂದ್ರತೆಯನ್ನು ಹೊಂದಿಕೊಂಡು ಕಿರಣಗಳು/ತರಂಗಗಳು ಸಂಪೂರ್ಣವಾಗಿ ಹಿಂದೆ ಬರಬಹುದು ಅಥವಾ ಸಂಪೂರ್ಣವಾಗಿ ತೂರಿಹೋಗಬಹುದು ಅಥವಾ ಸ್ವಲ್ಪ ತೂರಿ ಸ್ವಲ್ಪ ಹಿಂದೆ ಬರಬಹುದು, ಹೀಗೆ ಅಂಗಕ್ಕೆ ಬಡಿದು ಹಿಂದೆ ಬಂದ ಕಿರಣ ಅಥವಾ ತರಂಗಗಳನ್ನು ಸ್ಕ್ಯಾನಿಂಗ್ ಉಪಕರಣವು ಮರು ಸ್ವೀಕರಿಸಿ ಹಿಂದೆ ಬಂದ ತರಂಗಗಳ ಅನುಪಾತಕ್ಕೆ ಸರಿಯಾಗಿ ದೇಹದ ಒಳಗಿನ ಅಂಗದ ಸಾಂದ್ರತೆಯನ್ನು ಅಂದಾಜು ಮಾಡಿ ಉಪಕರಣದ ಕೆಳಗಿನ ಚರ್ಮದಿಂದ ಹಿಡಿದು ನೇರವಾಗಿ ಆ ಚರ್ಮದ ಕೆಳಗಿರುವ ವಿವಿಧ ಅಂಗ, ಅಂಗಾಂಶಗಳ ಅಡ್ಡ ಸೀಳ್ನೋಟದ ಚಿತ್ರವನ್ನು ಬಿಡಿಸಿಕೊಡುತ್ತದೆ. ಉಪಕರಣದಲ್ಲಿರುವ ತಂತ್ರಾಂಶವನ್ನು ಹೊಂದಿಕೊಂಡು ಈ ಚಿತ್ರವು ಕಪ್ಪು ಬಿಳುಪು ಅಥವಾ 3-D ಚಿತ್ರವಾಗಿರಬಹುದು. ಅನುಭವಿ ವೈದ್ಯನು ತಾನು ಅನಾಟಮಿ ತರಗತಿಯಲ್ಲಿ ಕಲಿತ ದೇಹದ ಅಂಗರಚನೆಯನ್ನು ಈ ಚಿತ್ರಕ್ಕೆ ಹೋಲಿಸಿಕೊಂಡು ಈ ಚಿತ್ರದಲ್ಲಿ ಯಾವ ಸಾಂದ್ರತೆಯು ಯಾವ ಅಂಗವೆಂದು ಸುಲಭದಲ್ಲಿ ಊಹಿಸಬಲ್ಲನು. ಹಾಗೆಯೇ ಆ ಅಂಗದಲ್ಲಿ ಬೆಳೆದ ಗಡ್ಡೆಗಳು, ಕಲ್ಲುಗಳು, ಬೇರೆ ಸಾಂದ್ರತೆ ಹೊಂದಿರುವುದರಿಂದ ಆ ಅಂಗದಲ್ಲಿ ಬೆಳೆದ ಗಡ್ಡೆ, ಕಲ್ಲು, ಕೀವು ಇತ್ಯಾದಿ ಖಾಯಿಲೆಗಳನ್ನು ಗುರುತಿಸಬಲ್ಲನು.

ಅತ್ಯಂತ ಸಾಮಾನ್ಯವಾಗಿ ಬಳಕೆಯಲ್ಲಿರುವ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಉಪಕರಣದಲ್ಲಿ ಅತೀ ಸೂಕ್ಷ್ಮವಾದ ಶಬ್ದ ತರಂಗಗಳನ್ನು ಬಳಸುತ್ತಾರೆ. ಸ್ಕ್ಯಾನಿಂಗ್ ಯಂತ್ರದಲ್ಲಿ ಎಕ್ಸ್-ರೇ ಕಿರಣವನ್ನೂ, M.R.I ಯಂತ್ರದಲ್ಲಿ ಅಯಸ್ಕಾಂತ ಶಕ್ತಿಯ ಫೊಟೊನ್ ಕಣವನ್ನು ಬಳಸುತ್ತಾರೆ.

ಸ್ಕ್ಯಾನಿಂಗ್ ಪರೀಕ್ಷೆಗೆ ಹೋಗುವಾಗ ಕನಿಷ್ಟ ಆರು ಗಂಟೆಗಳ ಕಾಲ ಊಟ ತಿಂಡಿ ತಿನ್ನದೆ ಹೋಗಬೇಕು. ಜಠರದಲ್ಲಿರುವ ಆಹಾರವು ಕೆಲವು ಅಂಗಗಳ ಸಾಂದ್ರತೆಯನ್ನು ತಪ್ಪಾಗಿ ಅರ್ಥೈಸುವಂತೆ ಮಾಡುವುದು ಇದಕ್ಕೆ ಒಂದು ಕಾರಣ. ಪಿತ್ತಕೋಶದ ಚಿತ್ರಣವು ಖಾಲಿ ಹೊಟ್ಟೆಯಲ್ಲಿದ್ದರೆ ಮಾತ್ರ ಸರಿಯಾಗಿ ದೊರಕುತ್ತದೆಂಬುದು ಇನ್ನೊಂದು ಕಾರಣ. ಅದೇ ರೀತಿ ಸ್ಕ್ಯಾನಿಂಗ್ ಮಾಡಬೇಕಾದರೆ ಮೂತ್ರ ತುಂಬಿರುವುದು ಅವಶ್ಯ. ಯಾಕೆಂದರೆ ಮೂತ್ರ ತುಂಬಿದ್ದರೆ ಮಾತ್ರ ಮೂತ್ರಕೋಶದ ಒಳಭಾಗದ ಚಿತ್ರ ದೊರಕಲು ಸಾಧ್ಯ. ಹಾಗೆಯೇ ಮೂತ್ರಕೋಶ ತುಂಬಿದ್ದರೆ ಅದರ ಹಿಂದಿರುವ ಅಂಗಗಳ ಚಿತ್ರವು ಸ್ಪಷ್ಟವಾಗಿರುತ್ತದೆ.

ದೇಹದ ಅಂಗಗಳಲ್ಲಿ ಬೆಳೆದ ಗಡ್ಡೆಗಳು, ಕಲ್ಲುಗಳು, ಕೀವು, ನೀರ್ಗುಳ್ಳೆಗಳು, ಅಂಗವೈಕಲ್ಯಗಳು, ರಕ್ತಪರಿಚಲನೆಯ ತೊಂದರೆಗಳು (ಹೆಪ್ಪು ಗಟ್ಟಿರುವುದು, ರಕ್ತಸ್ರಾವವಾಗಿರುವುದು), ಅಂಗಕ್ಕೆ ಬಿದ್ದ ಏಟುಗಳು, ಹೀಗೆ ನೂರಾರು ಖಾಯಿಲೆಗಳನ್ನು ಸ್ಕ್ಯಾನಿಂಗ್ ಪರೀಕ್ಷೆಯಿಂದ ಪತ್ತೆಹಚ್ಚಲು ಸಾಧ್ಯ. C.T ಸ್ಕ್ಯಾನ್‌ನಲ್ಲಿ ಬಳಸುವ ಕಿರಣಗಳು ಗರ್ಭಕ್ಕೆ ಹಾನಿಮಾಡಬಹುದಾದ್ದರಿಂದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್‌ನ್ನು ಗರ್ಭಿಣಿಯರ ಹಾಗೂ ಗರ್ಭದ ತಪಾಸಣೆಗೆ ಬಳಸುತ್ತಾರೆ. ಈ ತಪಾಸಣೆಯಿಂದ ಭ್ರೂಣಕ್ಕೇನಾದರೂ ಅಂಗವೈಕಲ್ಯವಿದ್ದರೆ ಕೂಡಾ ಪತ್ತೆ ಹಚ್ಚಬಹುದು. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್‌ನಿಂದ ಗರ್ಭಕ್ಕೆ/ಭ್ರೂಣಕ್ಕೆ ಹಾನಿಯಾಗುವುದಿಲ್ಲ. M.R.I ಸ್ಕ್ಯಾನಿಂಗ್‌ನಲ್ಲಿ ಅಯಸ್ಕಾಂತ ಶಕ್ತಿಯನ್ನು ಬಳಸುವುದರಿಂದ ದೇಹದಲ್ಲಿ ಈ ತಪಾಸಣೆಗೆ ಯಾವುದೇ ಲೋಹದ ಕೃತಕ ವಸ್ತುವನ್ನು (metal implant) ಬಳಸಿರಬಾರದು. P.E.T scan ಹಾಗೂ ಇವು nuclear scan ವಿಕಿರಣಗಳನ್ನು ಹೊರಸೂಸುವ ಕೆಲವು ಔಷಧಗಳನ್ನು ದೇಹಕ್ಕೆ ಚುಚ್ಚಿ ಅವು ರೋಗಪೀಡಿತ ಅಂಗಗಳಲ್ಲಿ ಸಂಗ್ರಹವಾದ ಪ್ರಮಾಣವನ್ನು ಅಳೆದು ರೋಗಪೀಡಿತ ಅಂಗದ ಚಿತ್ರವನ್ನು ಕೊಡುವ ಉಪಕರಣಗಳು. ಈ ಉಪಕರಣಗಳನ್ನು ಹೆಚ್ಚಾಗಿ ಕ್ಯಾನ್ಸರ್ ಕಾಯಿಲೆಯನ್ನು ಪತ್ತೆ ಹಚ್ಚಲು ಬಳಸುತ್ತಾರೆ.

ಯಾವುದೇ ಸ್ಕ್ಯಾನಿಂಗ್‌ನಲ್ಲಿ ದೇಹದ ಒಳಗಿನ ಅಂಗವನ್ನು ನೇರವಾಗಿ ವೀಕ್ಷಿಸಲು ಸಾಧ್ಯವಿಲ್ಲ. ಸ್ಕ್ಯಾನಿಂಗ್ ಉಪಕರಣವು ಕೊಟ್ಟ ಚಿತ್ರವನ್ನು ಇಮೇಜ್ (image) ಎಂದು ಕರೆಯುತ್ತೇವೆ. ಇದು ಯಂತ್ರವು ಉಪಯೋಗಿಸುವ ಕಿರಣ/ತರಂಗಗಳು ಹಾಗು ಅಂಗದ ಸಾಂದ್ರತೆಯೆಂಬ ಎರಡು ಮಾಹಿತಿಗಳನ್ನಾಧರಿಸಿ ಕಂಪ್ಯೂಟರ್ ತಂತ್ರಾಂಶ ಬಳಸಿ ಬಿಡಿಸಿದ ಚಿತ್ರ. ಹಾಗಾಗಿ ಇದು ಪರಿಪೂರ್ಣವೂ ಆಗದಿರಬಹುದು. ಬೇರೆ ಬೇರೆ ಸ್ಕ್ಯಾನಿಂಗ್ ಉಪಕರಣಗಳು ಬೇರೆ ಬೇರೆ ತರಹದ ಕಿರಣ/ತರಂಗಗಳನ್ನು ಬಳಸುವುದರಿಂದ ಅಲ್ಟ್ರಾಸೌಂಡ್ ಉಪಕರಣ ಹಾಗೂ C.T ಸ್ಕ್ಯಾನ್ ಅಥವಾ M.R.I ಉಪಕರಣಗಳಿಂದ ಪಡೆದ ಚಿತ್ರಗಳು ಬೇರೆ ಬೇರೆ ಇರುತ್ತವೆ ಹಾಗೂ ಖಾಯಿಲೆಯನ್ನು ಪತ್ತೆ ಹಚ್ಚುವ ವಿಷಯದಲ್ಲಿ ಒಂದು ವಿಫಲವಾದರೆ ಇನ್ನೊಂದು ಪತ್ತೆ ಹಚ್ಚೀತು. ಸ್ಕ್ಯಾನಿಂಗ್ ಯಂತ್ರ ಯಾವುದಾದರೂ ಅದು ಕೊಟ್ಟ ಚಿತ್ರವನ್ನು ರೋಗಿಯ ಚಿಹ್ನೆಗಳಿಗೆ ತಾಳೆಹಾಕಿ ನೋಡುವ ವೈದ್ಯನ ಪಾತ್ರವು ಇಲ್ಲಿ ಮಹತ್ವದ್ದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ

**ಪ್ರಕಟಣೆ**

ಸಂಧ್ಯಾ ವಂದನೆ, ಜಪ, ದೇವ ಪೂಜಾ ವಿಧಿಗಳ ತರಬೇತಿ ಕಾರ್ಯಕ್ರಮವನ್ನು ಸಂಘದ ಆಶ್ರಯದಲ್ಲಿ ದಿನಾಂಕ 06-05-2013ರ ಸೋಮವಾರದಿಂದ 7ದಿನದ ವರೆಗೆ ಪ್ರತಿದಿನ ಸಂಜೆ ಘಂಟೆ 5ರಿಂದ ಕನಿಷ್ಟ 2 ಘಂಟೆ ಕಾಲ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳವರ ಮಾರ್ಗದರ್ಶನದಲ್ಲಿ ಸಮಾಜ ಬಾಂಧವರಿಗಾಗಿ ಹಮ್ಮಿಕೊಳ್ಳಲಾಗಿದೆ. ವಯಸ್ಸಿನ ಮಿತಿ ಇಲ್ಲದೆ ಹೆಚ್ಚಿನ ಸಮಾಜ ಬಾಂಧವರು ಪಾಲ್ಗೊಂಡು ಈ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ವಿನಂತಿಸಿಕೊಳ್ಳಲಾಗಿದೆ. ಆಸಕ್ತರು ಪಂಚೆ, ಶಾಲು, ಕೌಳಿಗೆ ಸೌಟು ಮತ್ತು ಪುಸ್ತಕ, ಪೆನ್ನು ತರಬೇಕಾಗಿ ವಿನಂತಿ.

-ಕಾರ್ಯದರ್ಶಿ

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ಭುವರಾಹ ಸಂಕೀರ್ಣ, ವಾದಿರಾಜ ರಸ್ತೆ ಉಡುಪಿ - 1. ಫೋನ್ : 2522408

### ಬೇಕಾಗಿದ್ದಾರೆ

ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)ಯಲ್ಲಿ ಈ ಕೆಳಗಿನ ಹುದ್ದೆಗಳಿಗೆ ಕಂಪ್ಯೂಟರ್ ಅನುಭವವಿರುವ ಪದವೀಧರ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಕ್ಲಾರ್ಕ್-1**

ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ಭಾವಚಿತ್ರ, ವಿದ್ಯಾರ್ಹತೆ (ಅಂಕಪಟ್ಟಿಯ ಪ್ರತಿಯೊಂದಿಗೆ), ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ತಮ್ಮ ಅರ್ಜಿಯನ್ನು ಮೇಲೆ ತಿಳಿಸಿದ ವಿಳಾಸಕ್ಕೆ ಪ್ರತ್ಯಕ್ಷವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೇಳಿಕೊಳ್ಳಲಾಗಿದೆ. ಪುರುಷ ಅಭ್ಯರ್ಥಿಗಳಿಗೆ ಪ್ರಾಶಸ್ತ್ಯವಿದೆ.

ವಿ.ಸೂ. : ವಿಳಾಸದಲ್ಲಿ ದೂರವಾಣಿ ಸಂಖ್ಯೆ ನಮೂದಿಸಬೇಕು.

- ಕಾರ್ಯದರ್ಶಿ

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

ಪ್ರಿಯರೇ,


ಸ್ವಸ್ತಿ ಶ್ರೀ ಚಾಂದ್ರ ವಿಜಯ ನಾಮ ಸಂಠರದ ಚೈತ್ರ ಶುಕ್ಲ ಮೀನ ಮಾಸ
ತಾ.11-04-2013ರಿಂದ ತಾ.19-04-2013ರ ವರೆಗೆ

### ಕಿರುನವರಾತ್ರಿ ಮಹೋತ್ಸವವು


ಜರಗಲಿರುವುದು.

ತಮಗೆಲ್ಲರಿಗೂ ಆದರದ ಸ್ವಾಗತ -ಕಾರ್ಯದರ್ಶಿ

*Krishna Rao* Ph : 2520652
Mob. : 9902029048



**KISHAN**




Studio & Video

Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.

ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.28-04-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.15-04-2013 ಶುದ್ಧ ಪಂಚಮಿ ಹಾಗೂ ತಾ.30-04-2013ರಂದಂದು ಬಹುಳ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.30-04-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**


**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ವಧೂವರರ ಮಾಹಿತಿಗಾಗಿ....

ನಮ್ಮ ಸಮಾಜದ ವಧೂವರರ ಮಾಹಿತಿಗಾಗಿ ಈ ಇ-ಮೇಲ್‌ನ್ನು ಸಂಪರ್ಕಿಸಿರಿ.
g.b.i.c.s.m@gmail.com ಅಥವಾ belle.d.v@gmail.com
ಹೆಚ್ಚಿನ ಮಾಹಿತಿಗಾಗಿ ಬೆಳ್ಳೆ ದೇವರಾವ್ ಇವರನ್ನು ಸಂಪರ್ಕಿಸಬಹುದು.

**ಉದ್ಯೋಗ ಮಾಹಿತಿ :** ವಿವಿಧ ಕೇಂದ್ರ ಸರ್ಕಾರಿ ಉದ್ಯೋಗಗಳಿಗಾಗಿ ಅರ್ಹ ಅಭ್ಯರ್ಥಿಗಳಿಗೆ ಕರೆ ನೀಡಿದ್ದು, ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟನ್ನು ವೀಕ್ಷಿಸಬಹುದು.
**www.ssconline2.gov.in**

ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್ Cell : 9845644556
9483913344



ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Celebrations
Conference & Party Hall (Air Conditioned)

HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR,
KUNJIBETTU POST, UDUPI - 576 102. Mob.: 9632099439
Prop. : ADARSH RAO

Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org